ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು –೧೦೬

**ಪಟ್ಟಿ – ೦೪**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತೆರಡನೆಯ ಅಧಿವೇಶನ**

**ಗುರುವಾರ, ದಿನಾಂಕ : ೨೪ನೇ ನವೆಂಬರ್, ೨೦೧೬**

---

## ಸಮೂಹ – IV

೧. ಮುಖ್ಯಮಂತ್ರಿಗಳು.

೨. ಗೃಹ ಸಚಿವರು.

೩. ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು.

೪. ನಗರಾಭಿವೃದ್ಧಿ ಹಾಗೂ ಹಜ್ ಸಚಿವರು.

೫. ಅಬಕಾರಿ ಸಚಿವರು.

---

## ರಾಜ್ಯ ಸರ್ಕಾರಿ ನೌಕರರ ನೂತನ ಪಿಂಚಣಿ ಯೋಜನೆ (ಎನ್.ಪಿ.ಎಸ್) ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–**

೩೧೧ (೪೦೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರಿ ನೌಕರರಿಗೆ ನೂತನ ಪಿಂಚಣಿ ಯೋಜನೆಯನ್ನು ಯಾವ ವರ್ಷದಿಂದ ಜಾರಿಗೆ ತಂದಿದೆ ;

(ಆ) ಎಷ್ಟು ಜನ ನೌಕರರು ಈ ನೂತನ ಪಿಂಚಣಿ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿದ್ದಾರೆ ;

(ಇ) ಈ ಯೋಜನೆಯಲ್ಲಿ ನೌಕರರಿಂದ ಕಡಿತಗೊಂಡ ಹಣವು ಎಲ್ಲಿಗೆ ಹೋಗುತ್ತಿದೆ ; ಎಲ್ಲಿ ಹೂಡಿಕೆ ಮಾಡಲಾಗುತ್ತಿದೆ ;

(ಈ) ಈ ಯೋಜನೆಯಲ್ಲಿ ಹೂಡಿಕೆಯಾಗುತ್ತಿರುವ ಹಣಕ್ಕೆ ಭದ್ರತೆ ಇದೆಯೇ ;

(ಉ) ಈ ಯೋಜನೆಯಿಂದ ಹೊರಕ್ಕೆ ಹೋದ ನೌಕರರಿಗೆ ಪಿಂಚಣಿ ನಿಗದಿಯಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಈ ಯೋಜನೆಯಲ್ಲಿನ ಗೊಂದಲಗಳನ್ನು ಬಗೆಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ರಾಜ್ಯ ಸರ್ಕಾರಿ ನೌಕರರಿಗೆ ನೂತನ ಪಿಂಚಣಿ ಯೋಜನೆ (New Pension Scheme) ಜಾರಿಯಾಗಿರುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೩೧೨ (೪೯೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸರ್ಕಾರಿ ನೌಕರರಿಗಾಗಿ ಜಾರಿಗೊಳಿಸಿರುವ ನೂತನ ಪಿಂಚಣಿ ಯೋಜನೆ (New Pension Scheme) ಜಾರಿಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಇದೆಯೇ ; ಇದ್ದಲ್ಲಿ, ನೌಕರರಿಗೆ ಆಗುವ ಪ್ರಯೋಜನಗಳೇನು ; (ಮಾಹಿತಿ ನೀಡುವುದು)

(ಆ) ಸದರಿ ನೂತನ ಪಿಂಚಣಿ ಯೋಜನೆ (New Pension Scheme) ಅಡಿಯಲ್ಲಿ ಹೈದ್ರಾಬಾದ್-ಕರ್ನಾಟಕ ಪ್ರದೇಶದ ೦೬ ಜಿಲ್ಲೆಗಳು ಹಾಗೂ ಹರಪನಹಳ್ಳಿ ತಾಲ್ಲೂಕಿನಲ್ಲಿ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ನೌಕರರ ಸಂಖ್ಯೆ ಎಷ್ಟು ; (ಜಿಲ್ಲಾವಾರು, ಇಲಾಖಾವಾರು ವಿವರ ನೀಡುವುದು)

(ಇ) ಸದರಿ ನೂತನ ಪಿಂಚಣಿ ಯೋಜನೆ (New Pension Scheme) ಅಡಿಯಲ್ಲಿರುವ ಸರ್ಕಾರಿ ನೌಕರರ ಪೈಕಿ ಇಲ್ಲಿಯವರೆಗೆ ಸ್ವಯಂ ನಿವೃತ್ತಿ ಹೊಂದಿದ/ಮೃತ ಹೊಂದಿರುವ ಸರ್ಕಾರಿ ನೌಕರರ ಸಂಖ್ಯೆ ಎಷ್ಟು ; ಸದರಿಯವರ ಕುಟುಂಬದವರಿಗೆ ದೊರಕಿರುವ ಪಿಂಚಣಿ ಸೌಲಭ್ಯ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಸದರಿ ನೂತನ ಪಿಂಚಣಿ ಯೋಜನೆ (New Pension Scheme) ಸರ್ಕಾರಿ ನೌಕರರಿಗೆ ಅನುಕೂಲಗಳಿಗಿಂತ ಅನಾನುಕೂಲಗಳೇ ಹೆಚ್ಚಾಗಿದ್ದು, ಈ ನಿಟ್ಟಿನಲ್ಲಿ ಸದರಿ ಯೋಜನೆಯನ್ನು ರದ್ದುಪಡಿಸಿ, ಈ ಹಿಂದೆ ಜಾರಿಯಲ್ಲಿರುವಂತಹ ನಿಶ್ಚಿತ ಪಿಂಚಣಿ ಯೋಜನೆ ಜಾರಿಗೆ ತರುವಂತೆ ಒತ್ತಾಯಿಸಿ ಹೋರಾಟ ಮಾಡುತ್ತಿರುವ ವಿಚಾರ ಹಾಗೂ ನೆರೆ ರಾಜ್ಯಗಳಲ್ಲಿ ಸದರಿ ನೂತನ ಪಿಂಚಣಿ ಯೋಜನೆ (New Pension Scheme) ರದ್ದುಪಡಿಸಿರುವ ಬಗ್ಗೆ ಸರ್ಕಾರದ ಗಮನಕ್ಕೆ ಇದೆಯೇ ; ಇದ್ದಲ್ಲಿ, ಸರ್ಕಾರದ ಮುಂದಿರುವ ಯೋಜನೆಗಳೇನು ? (ಮಾಹಿತಿ ನೀಡುವುದು)

## ಬೆಳಗಾವಿ, ಮೈಸೂರು ಮತ್ತು ಬೆಂಗಳೂರು ವಿಭಾಗದಲ್ಲಿ ೩೭೧(ಜೆ) ಅಡಿಯಲ್ಲಿ ಶೇ.೮ರಷ್ಟು ಮೀಸಲಾತಿ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೩೧೩ (೪೯೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಬೆಳಗಾವಿ, ಮೈಸೂರು ಹಾಗೂ ಬೆಂಗಳೂರು ವಿಭಾಗದಲ್ಲಿ ಸಂವಿಧಾನ ೩೭೧(ಜೆ) ಅಡಿಯಲ್ಲಿ ಶೇ. ೮% ಮೀಸಲಾತಿ ಪ್ರಕಾರ ಆದ ನೇಮಕಾತಿಗಳು ಎಷ್ಟು; ಹಾಗೂ ವಿವಿಧ ಇಲಾಖೆಗಳಲ್ಲಿ ಆದ ಬಡ್ತಿಗಳು ಎಷ್ಟು; (ಇಲಾಖಾವಾರು, ವಿಭಾಗವಾರು ಸಂಪೂರ್ಣ ವಿವರ ನೀಡುವುದು)

(ಆ) ಹೈದ್ರಾಬಾದ್–ಕರ್ನಾಟಕ ಪ್ರದೇಶ ಹೊರತುಪಡಿಸಿ ೩೭೧(ಜೆ) ಅಡಿಯಲ್ಲಿ ರಾಜ್ಯದ ಇತರೆ ವಿಭಾಗಗಳಲ್ಲಿ ೩೭೧ (ಜೆ) ಆಶಯ ಪ್ರಕಾರ ನೇಮಕಾತಿ ಹಾಗೂ ಮುಂಬಡ್ತಿಗಳಲ್ಲಿ ಶೇ೮% ಮೀಸಲಾತಿ ಕಲ್ಪಿಸದೆ ಇದ್ದಲ್ಲಿ ಕಾರಣಗಳೊಂದಿಗೆ ಸಂಪೂರ್ಣ ವಿವರ ನೀಡುವುದು ;

(ಇ) ಹೈದ್ರಾಬಾದ್ – ಕರ್ನಾಟಕ ಪ್ರದೇಶ ಹೊರತುಪಡಿಸಿ ೩೭೧(ಜೆ) ಅಡಿಯಲ್ಲಿ ರಾಜ್ಯದ ಇತರೆ ವಿಭಾಗಗಳಲ್ಲಿ ೩೭೧(ಜೆ) ಆಶಯ ಪ್ರಕಾರ ನೇಮಕಾತಿ ಹಾಗೂ ಮುಂಬಡ್ತಿಗಳಲ್ಲಿ ಶೇ೮% ಮೀಸಲಾತಿಯಲ್ಲಿ ಗೊಂದಲ ಸೃಷ್ಟಿಯಾಗಿ ನ್ಯಾಯಾಲಯದಲ್ಲಿ ವ್ಯಾಜ್ಯ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು ಹಾಗೂ ಪ್ರಸ್ತುತ ವ್ಯಾಜ್ಯ ಯಾವ ಹಂತದಲ್ಲಿದೆ ; (ವಿವರ ನೀಡುವುದು)

(ಈ) ಸದರಿ ೩೭೧(ಜೆ) ಅಡಿಯಲ್ಲಿರುವಂತಹ ಶೇ ೮% ಮೀಸಲಾತಿ ಗೊಂದಲಗಳನ್ನು ನಿವಾರಣೆ ಮಾಡಲು ಸರ್ಕಾರ ಸಂವಿಧಾನದಲ್ಲಿ ತಿದ್ದುಪಡಿ ತರಲು ಮುಂದಾಗುವುದೇ ; ಇದ್ದಲ್ಲಿ, ವಿಧಾನ ಸಭೆಯಲ್ಲಿ ಹಾಗೂ ಸಂಸತ್ ಸದನದಲ್ಲಿ ತಿದ್ದುಪಡಿ ತರಲು ಕ್ರಮ ಕೈಗೊಳ್ಳುವುದೇ ? (ವಿವರ ನೀಡುವುದು)

## ಹೈದ್ರಾಬಾದ್–ಕರ್ನಾಟಕ ಸಂವಿಧಾನದ ೩೭೧ (ಜೆ) ಅನುಷ್ಠಾನಗೊಳಿಸಲು ರಚಿಸಲಾದ ಸಚಿವ ಸಂಪುಟ ಉಪಸಮಿತಿ ಸಭೆ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೩೧೪ (೪೮೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್–ಕರ್ನಾಟಕ ಸಂವಿಧಾನದ ೩೭೧ (ಜೆ) ಅನುಷ್ಠಾನಗೊಳಿಸುವ ಸಲುವಾಗಿ ರಚಿಸಲಾದ ಸಚಿವ ಸಂಪುಟದ ಉಪಸಮಿತಿ ಎಷ್ಟು ಬಾರಿ ಸಭೆಗಳನ್ನು ಜರುಗಿಸಿವೆ ; ಯಾವ ಯಾವ ನಿರ್ಣಯಗಳನ್ನು ಕೈಗೊಂಡಿದೆ ; ಹಾಗೂ ಮೂಲ ೩೭೧(ಜೆ) ಗೆ ತಿದ್ದುಪಡಿಗಳೇನಾದರೂ ತರಲಾಗಿದೆಯೇ ; (ಸಂಪೂರ್ಣ ವಿವರ ನೀಡುವುದು)

(ಆ) ಸದರಿ ನಿರ್ಣಯಗಳು ಹಾಗೂ ತಿದ್ದುಪಡಿಗಳಿಗೆ ವಿಧಾನಮಂಡಲದಲ್ಲಿ ಹಾಗೂ ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆಯೇ ; (ವಿವರ ನೀಡುವುದು)

(ಇ) ೩೭೧ (ಜೆ) ಅಡಿಯ ಕರ್ನಾಟಕ ಸಾರ್ವಜನಿಕ ಉದ್ಯೋಗ ಆದೇಶ ೨೦೧೩ರ ೧೨ಎ, ೧೩ಎ ಹಾಗೂ ೧೩ಬಿ ಅನ್ವಯ ಕಲ್ಪಿಸಲಾದ ಸೌಲಭ್ಯಗಳು ಯಾವುವು ಪ್ರತ್ಯೇಕ ಮಾಹಿತಿ ನೀಡುವುದು ;

ಹಾಗೂ ಈ ಮೇಲ್ಕಂಡ ೧೨ಎ, ೧೩ಎ, ಹಾಗೂ ೧೩ಬಿ ಅನ್ವಯ ಸರ್ಕಾರ ಕೈಗೊಂಡ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

(ಈ) ೩೭೧(ಜೆ) ಅಡಿಯ ಕರ್ನಾಟಕ ಸಾರ್ವಜನಿಕ ಉದ್ಯೋಗ ಆದೇಶ ೨೦೧೩ರ ೧೨ಎ, ೧೩ಎ, ಹಾಗೂ ೧೩ಬಿ ಅನ್ವಯ ೪ ವರ್ಷ ಗತಿಸಿದರೂ ಸೌಲಭ್ಯಗಳನ್ನು ಒದಗಿಸುವಲ್ಲಿ ವಿಫಲವಾಗಿ ೩೭೧(ಜೆ) ಸ್ಪಷ್ಟ ಉಲ್ಲಂಘನೆಯಾಗಿರುವುದಕ್ಕೆ ಕಾರಣಗಳೇನು ; (ವಿವರ ನೀಡುವುದು)

(ಉ) ಈಗಲಾದರೂ ಸರ್ಕಾರ ಎಚ್ಚೆತ್ತುಕೊಂಡು ಸಂಪುಟದ ಉಪಸಮಿತಿಗೆ ಈ ಭಾಗದ ಸಚಿವರನ್ನು ಹಾಗೂ ೩೭೧ (ಜೆ) ಕೋಶವನ್ನು ಬೆಂಗಳೂರಿನಿಂದ ಕಲಬುರಗಿಗೆ ಸ್ಥಳಾಂತರಿಸಲು ಸರ್ಕಾರ ಮುಂದಾಗುವುದೇ ? (ಸಂಪೂರ್ಣ ವಿವರ ನೀಡುವುದು)

**ಕೇಂದ್ರದ "ಸ್ಮಾರ್ಟ್‌ಸಿಟಿ" ಯೋಜನೆಗೆ ಇರುವ ಮಾನದಂಡಗಳ ಬಗ್ಗೆ**

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೩೧೫ (೯೯೧) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೇಂದ್ರ ಸರ್ಕಾರದ "ಸ್ಮಾರ್ಟ್‌ಸಿಟಿ" ಯೋಜನೆಗೆ ಇರುವ ಮಾನದಂಡಗಳೇನು ; ಮಹಾನಗರವಾರು ಮಾನದಂಡಗಳ ವಿವರ ನೀಡುವುದು ;

(ಆ) ರಾಜ್ಯದಿಂದ ಯಾವ ಮಹಾನಗರಗಳಿಗೆ "ಸ್ಮಾರ್ಟ್‌ಸಿಟಿ" ಯೋಜನೆಯ ಪ್ರಸ್ತಾವನೆಯನ್ನು ಕೇಂದ್ರಕ್ಕೆ ಕಳುಹಿಸಲಾಗಿತ್ತು ; ಮಹಾನಗರವಾರು ವಿವರ ನೀಡುವುದು ; ಕೇಂದ್ರದಿಂದ ಮಂಜೂರಾತಿ ಪಡೆದ ಮಹಾನಗರಗಳಾವುವು ;

(ಇ) ಕಲಬುರಗಿ ಮಹಾನಗರ ಪಾಲಿಕೆ ಹಾಗೂ ಬಳ್ಳಾರಿ ಮಹಾನಗರ ಪಾಲಿಕೆಗಳು "ಸ್ಮಾರ್ಟ್‌ಸಿಟಿ" ಯೋಜನೆ ಕೈತಪ್ಪಲು ನೇರವಾಗಿ ಜವಾಬ್ದಾರಿಯಾಗಿರುವ ನಗರಾಭಿವೃದ್ಧಿ ಇಲಾಖೆ ಹಾಗೂ ಮಹಾನಗರ ಪಾಲಿಕೆಯು ಯೋಜನೆ ರೂಪಿಸುವಲ್ಲಿ ವಿಫಲವಾಗಿರುವುದು ನಿಜವೇ ; (ಸಂಪೂರ್ಣ ವಿವರ ನೀಡುವುದು)

(ಈ) ಕಲಬುರಗಿ ಮಹಾನಗರ ಪಾಲಿಕೆ ಹಾಗೂ ಬಳ್ಳಾರಿ ಮಹಾನಗರ ಪಾಲಿಕೆಗಳು ಕೇಂದ್ರದ "ಸ್ಮಾರ್ಟ್‌ಸಿಟಿ" ಯೋಜನೆಗೆ ಮರು ಪರಿಶೀಲಿಸಿ ಕೇಂದ್ರದಕ್ಕೆ ಮರು ಪ್ರಸ್ತಾವನೆ ಸಲ್ಲಿಸಲು ಸರ್ಕಾರ ಮುಂದಾಗುವುದೇ ? (ವಿವರ ನೀಡುವುದು)

## ಹೈದ್ರಾಬಾದ್–ಕರ್ನಾಟಕ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ/ಅರೆಸರ್ಕಾರಿ ಕಾರ್ಯಾಲಯ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೩೧೬ (೪೯೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್–ಕರ್ನಾಟಕ ಭಾಗದ ೬ ಜಿಲ್ಲೆಗಳು ಹಾಗೂ ಹರಪ್ಪನಹಳ್ಳಿ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ/ ಅರೆಸರ್ಕಾರಿ ಕಾರ್ಯಾಲಯಗಳು ಯಾವುವು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಹೈದ್ರಾಬಾದ್–ಕರ್ನಾಟಕ ಭಾಗದ ೬ ಜಿಲ್ಲೆಗಳು ಹಾಗೂ ಹರಪ್ಪನಹಳ್ಳಿ ತಾಲ್ಲೂಕಿನಲ್ಲಿ ಕಳೆದ ೨೦೧೫–೧೬ ವರ್ಷದಿಂದ ಖಾಲಿ ಇರುವ ಹುದ್ದೆಗಳೆಷ್ಟು ; (ಜಿಲ್ಲಾವಾರು, ಇಲಾಖಾವಾರು ಮಾಹಿತಿ ನೀಡುವುದು)

(ಇ) ಹೈದ್ರಾಬಾದ್–ಕರ್ನಾಟಕ ಭಾಗದ ೬ ಜಿಲ್ಲೆಗಳು ಹಾಗೂ ಹರಪ್ಪನಹಳ್ಳಿ ತಾಲ್ಲೂಕಿನಲ್ಲಿ ಕಳೆದ ೨೦೧೫–೧೬ನೇ ಸಾಲಿನಿಂದ ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಮಾಡಿದ ಸಂಖ್ಯೆ ಎಷ್ಟು ? (ಜಿಲ್ಲಾವಾರು, ಇಲಾಖಾವಾರು ಮಾಹಿತಿ ನೀಡುವುದು)

## ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದ ಸಿಬ್ಬಂದಿಗಳಿಗೆ ೧೯೮೨ರ ಆದೇಶದ ಪಾಲನೆ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–**

೩೧೭ (೫೦೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಯಾವ ಯಾವ ಇಲಾಖೆಯಲ್ಲಿ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದ ಸಿಬ್ಬಂದಿಯವರಿಗೆ ಮುಂಬಡ್ತಿಯಲ್ಲಿ ಮೀಸಲಾತಿಯನ್ನು ಕಲ್ಪಿಸುವ ದೃಷ್ಟಿಯಿಂದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ೧೯೮೨ರಲ್ಲಿ ಹೊರಡಿಸಿರುವ ಸುತ್ತೋಲೆಯುನ್ನು ಅಳವಡಿಸಿಕೊಂಡು ಅನುಪಾಲನೆ ಮಾಡಲಾಗುತ್ತಿದೆಯೇ ;

(ಆ) ಅಳವಡಿಸಿಕೊಂಡಿದ್ದರೆ, ಈ ಮೀಸಲಾತಿಯನ್ವಯ ಮುಂಬಡ್ತಿ ಹೊಂದಿದ ನೌಕರರ ಸಂಖ್ಯೆ ಎಷ್ಟು; ಯಾವ ವೃಂದದಿಂದ ಮುಂಬಡ್ತಿ ಹೊಂದಿದ್ದಾರೆ ಹಾಗೂ ಕಾರ್ಯನಿರ್ವಹಿಸುತ್ತಿರುವವರ ಹೆಸರು ಮತ್ತು ಪದನಾಮ, ಇಲಾಖಾವಾರು ಮಾಹಿತಿ ಒದಗಿಸುವುದು ;

(ಇ) ವಿವಿಧ ಇಲಾಖೆಗಳಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ೧೯೮೨ರಲ್ಲಿ ಹೊರಡಿಸಿರುವ ಸುತ್ತೋಲೆಯನ್ನು ಅಳವಡಿಸಿಕೊಳ್ಳದೇ ಮುಂಬಡ್ತಿಯಲ್ಲಿ ಪರಿಶಿಷ್ಠ ಜಾತಿ / ಪರಿಶಿಷ್ಠ

ಪಂಗಡದ ಸಿಬ್ಬಂದಿಯವರಿಗೆ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಮುಂಬಡ್ತಿಯಲ್ಲಿ ಅನ್ಯಾಯವೆಸಗಿರುವವರ ವಿರುದ್ಧ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ; ಇಲ್ಲದಿದ್ದಲ್ಲಿ, ಸಕಾರಣಗಳೇನು ಅಂತಹವರ ವಿರುದ್ಧ ಸರ್ಕಾರ ಕಠಿಣ ಕಾನೂನು ಕ್ರಮ ಕೈಗೊಳ್ಳುವುದೇ ?

## ಮಹಾನಗರ ಪಾಲಿಕೆಗಳ ಸಾಮಾನ್ಯ ಸಭೆ ವಿಶೇಷ ಸಭೆ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–**

೩೧೮ (೫೦೨) ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಜಯಪುರ ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳ ಮಹಾನಗರ ಪಾಲಿಕೆಗಳಲ್ಲಿ ಕಳೆದ ೦೨ ವರ್ಷಗಳಲ್ಲಿ ಸಾಮಾನ್ಯ ಸಭೆ ಹಾಗೂ ವಿಶೇಷ ಸಭೆ ನಡೆಸಿರುವುದರ ವಿವರ ನೀಡುವುದು ;

(ಆ) ಈ ಸಭೆ ನಡೆಸುವ ಕುರಿತು ಇರುವ ನಿಯಮಾವಳಿಗಳೇನು ;ಯಾವ ಯಾವ ಮಹಾನಗರ ಪಾಲಿಕೆಗಳಲ್ಲಿ ನಿಯಮಿತವಾಗಿ ಸಭೆ ನಡೆಸದೇ ಇರುವ ಬಗ್ಗೆ ದೂರುಗಳು ಬಂದಿವೆ ; (ಅವುಗಳ ವಿವರ ನೀಡುವುದು)

(ಇ) ಈ ಸಭೆಗಳನ್ನು ನಿಯಮಿತದಂತೆ ನಡೆಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಈ) ವಿಜಯಪುರ ಮಹಾನಗರ ಪಾಲಿಕೆ ಸಭೆಗಳ ಸಾಮಾನ್ಯ ಸಭೆ ಹಾಗೂ ವಿಶೇಷ ಸಭೆಗಳ ಕಳೆದ ೦೨ ವರ್ಷಗಳ ನಡವಳಿಗಳ

ಪ್ರತಿಯನ್ನು ಹಾಗೂ ವಿಜಯಪುರ ಮಹಾನಗರ ಪಾಲಿಕೆಯ ಸದಸ್ಯರ / ಪದನಿಮಿತ್ತ ಸದಸ್ಯತ್ವ ಹೊಂದಿದ ಶಾಸಕ / ಸಂಸದರ ಹೆಸರುಗಳನ್ನು ಒದಗಿಸುವುದು ;

(ಉ) ಶಾಸಕರು ಸಂಸದರು ಮಹಾನಗರ ಪಾಲಿಕೆ ಸದಸ್ಯರಾಗುವ ಕುರಿತು ಇರುವ ನಿಯಮಾವಳಿಗಳು ಏನು ; ಅವರಿಗಿರುವ ಅಧಿಕಾರಿ ಹಾಗೂ ವ್ಯಾಪ್ತಿ ಏನು ? (ಸಂಪೂರ್ಣ ವಿವರ ಒದಗಿಸುವುದು)

## ಎಸ್‌ಸಿ ಎಸ್‌ಪಿ / ಟಿ.ಎಸ್.ಪಿ ಅಡಿ ಒದಗಿಸಿದ ಅನುದಾನ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–**

೩೧೯ (೫೦೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೩–೧೪, ೨೦೧೪–೧೫, ೨೦೧೫–೧೬ ಹಾಗೂ ೨೦೧೬–೧೭ ರಲ್ಲಿ ಎಸ್‌ಸಿ ಎಸ್‌ಪಿ / ಟಿ.ಎಸ್.ಪಿ ಅಡಿ ರಾಜ್ಯ ಸರ್ಕಾರ ಒದಗಿಸಿದ ಅನುದಾನ ಎಷ್ಟು; ಮಂಜೂರಾದ ಹಣ ಎಷ್ಟು; ಬಳಕೆಯಾದ ಹಣ ಎಷ್ಟು; ಉಳಿಕೆ ಅನುದಾನ ಎಷ್ಟು; (ಇಲಾಖಾವಾರು ಮಾಹಿತಿ ನೀಡುವುದು)

(ಆ) ಉಳಿಕೆ ಅನುದಾನವನ್ನು ಹೇಗೆ ಉಪಯೋಗಿಸಲಾಗಿದೆ ?

## ಪೊಲೀಸರ ಬೇಡಿಕೆಗಳ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–**

೩೨೦ (೪೯೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಪೊಲೀಸರು ಪ್ರತಿಭಟನೆ ನಡೆಸಿದ್ದಾರೆಯೇ ; ಅಥವಾ ಪ್ರತಿಭಟನೆ ನಡೆಸುವ ವಿಚಾರವಾಗಿ ಎಚ್ಚರಿಕೆ ನೀಡಲಾಗಿತ್ತೇ ; ಈ ವಿಚಾರವಾಗಿ ಪ್ರತಿಭಟನೆ ಮಾಡಿದವರನ್ನು ಬಂಧಿಸಲಾಗಿದೆಯೇ ;

(ಆ) ಪೊಲೀಸರ ಬೇಡಿಕೆಗಳೇನು ;

(ಇ) ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ರಾಜ್ಯದಲ್ಲಿ ಪೊಲೀಸರಿಗೆ ನೀಡಲಾಗುತ್ತಿರುವ ಸೌಲಭ್ಯಗಳ ಸಂಪೂರ್ಣ ವಿವರ ನೀಡುವುದು ;

(ಉ) ಪೊಲೀಸರ ವೇತನದಲ್ಲಿ ಏರಿಕೆಗೆ ಸರ್ಕಾರದ ಕ್ರಮ ಏನು ; ಎಷ್ಟು ಪ್ರಮಾಣದಲ್ಲಿ ಏರಿಕೆ ಮಾಡಲಾಗುವುದು ?

## ಕೆಂಪೇಗೌಡ ಬಡಾವಣೆಯ ನಿವೇಶನ ಠೇವಣಿ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೨೧ (೫೦೬) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಿಸಿರುವ ಕೆಂಪೇಗೌಡ ಬಡಾವಣೆಯಲ್ಲಿ ಹಂಚಿಕೆಗೆ ಲಭ್ಯವಿರುವ ನಿವೇಶನಗಳು ಎಷ್ಟು;

(ಆ) ಬಡಾವಣೆಯಲ್ಲಿ ನಿವೇಶನ ಅಕಾಂಕ್ಷಿಗಳಿಂದ ಸಂದಾಯವಾಗಿರುವ ಠೇವಣಿ ಹಣ ಎಷ್ಟು; ಈ ಹಣವನ್ನು ಯಾವ ಬ್ಯಾಂಕಿನಲ್ಲಿ ಎಷ್ಟು ಖಾತೆಗಳಲ್ಲಿ ಠೇವಣಿ ಇಡಲಾಗಿದೆ ;

(ಇ) ನಿವೇಶನಾಕಾಂಕ್ಷಿಗಳಿಗೆ ನಿವೇಶನ ಹಂಚಿಕೆ ಮಾಡಲಾಗಿದೆಯೇ ; ಹಾಗಿದ್ದಲ್ಲಿ, ಹಂಚಿಕೆಯಾಗಿರುವ ನಿವೇಶನಗಳ ಸಂಖ್ಯೆ ಎಷ್ಟು; ನಿವೇಶನ ದೊರಕದವರಿಗೆ ಅವರ ಠೇವಣಿ ಹಣ ಹಿಂದುರಿಗಿಸಲಾಗಿದೆಯೇ ;

(ಈ) ಠೇವಣಿ ಹಣ ಹಿಂದಿರುಗಿಸಲು ಕೈಗೊಂಡಿರುವ ಕ್ರಮಗಳೇನು ; ಎಷ್ಟು ಜನರಿಗೆ ಹಣ ಹಿಂದಿರುಗಿಸಲಾಗಿದೆ ? (ವಿವರ ನೀಡುವುದು)

## ಕೆ.ಪಿ.ಎಸ್.ಸಿ. ಯಲ್ಲಿನ ನೇಮಕಾತಿ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೨೨ (೫೦೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೆ.ಪಿ.ಎಸ್.ಸಿ ಮೂಲಕ ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳಿಗೆ ಅರ್ಜಿ ಕರೆದು ಪರೀಕ್ಷೆ ನಡಸಿ, ಸಂದರ್ಶನ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಕಾರಣಗಳೇನು ; (ವಿವರ ನೀಡುವುದು)

(ಆ) ಸದರಿ ನೇಮಕಾತಿಯು ಹೋಟಾ ಸಮಿತಿಯ ಶಿಫಾರಸ್ಸಿನಂತೆಯೇ ನಡೆದಿದೆಯೇ ; ಹಾಗಿಲ್ಲದಿದ್ದಲ್ಲಿ, ಕಾರಣಗಳೇನು ; (ವಿವರ ನೀಡುವುದು)

(ಇ) ನೇಮಕಾತಿಯಲ್ಲಿ ಸಮಿತಿಯ ಶಿಫಾರಸ್ಸಿನಂತೆ ೧:೩ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಹ್ವಾನಿಸಿರುವುದು ನ್ಯಾಯವಲ್ಲವೇ ;

(ಈ) ಸಂದರ್ಶನಕ್ಕೆ ಅಭ್ಯರ್ಥಿಗಳ ಅನುಪಾತ ಆಯ್ಕೆಯಲ್ಲಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ನಡುವೆ ಭಿನ್ನಾಭಿಪ್ರಾಯಗಳು ಸಾರ್ವಜನಿಕವಾಗಿ ಕೇಳಿ ಬಂದಿರುವುದು ನಿಜವೇ ; ಹಾಗಿದ್ದಲ್ಲಿ, ವಿವರ ನೀಡುವುದು;

(ಉ) ಸಾರ್ವಜನಿಕರ ಅಪನಂಬಿಕೆಗೆ ಕಾರಣವಾಗಿರುವ ಕೆ.ಪಿ.ಎಸ್.ಸಿಯನ್ನು ನಂಬಿಕೆಗೆ ಅರ್ಹಗೊಳಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ? (ವಿವರ ನೀಡುವುದು)

## ೨೦೧೧ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ಸ್ ಹುದ್ದೆಗಳಿಗೆ ನೇಮಕವಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–**

೩೨೩ (೧೨೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೧ನೇ ಸಾಲಿನಲ್ಲಿ ಕರ್ನಾಟಕ ಲೋಕ ಸೇವಾ ಆಯೋಗವು ಗೆಜೆಟೆಡ್ ಪ್ರೊಬೆಷನರ್ಸ್ ಹುದ್ದೆಗಳಿಗೆ ಎಷ್ಟು ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಯಾವಾಗ ಅಧಿಸೂಚನೆ ಹೊರಡಿಸಲಾಗಿತ್ತು ;

(ಆ) ನೇಮಕಾತಿ ಹೊಂದಿದವರಿಗೆ ಆದೇಶ ನೀಡದಿರಲು ಕಾರಣಗಳೇನು ;

(ಇ) ನೇಮಕಾತಿ ಪ್ರಾಧಿಕಾರದ ತಪ್ಪಿನಿಂದಾಗಿ ಅರ್ಹ ಅಭ್ಯರ್ಥಿಗಳಿಗೆ ಅನ್ಯಾಯವಾಗಬಾರದೆಂದು ಕರ್ನಾಟಕ ಆಡಳಿತ ಮಂಡಳಿ ತನ್ನ ಆದೇಶದಲ್ಲಿ ಉಲ್ಲೇಖಿಸಿರುವುದು ನಿಜವೇ ;

(ಈ) ೨೦೧೧ನೇ ಸಾಲಿನಲ್ಲಿ ಗೆಜೆಟೆಡ್ ಪ್ರೊಬೆಷನರ್ಸ್ ಹುದ್ದೆಗಳಿಗೆ ನೇಮಕವಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಕರ್ನಾಟಕ ಆಡಳಿತ ಮಂಡಳಿಯು ನೀಡಿದ ಕಾಲಾವಕಾಶ ಎಷ್ಟು ;

(ಉ) ಈ ಕಾಲಾವಕಾಶದೊಳಗೆ ನೇಮಕಾತಿ ಆದೇಶ ನೀಡಲು ಸರ್ಕಾರ ಉದ್ದೇಶಿಸಿದೆಯೇ ;

(ಊ) ಈ ಕುರಿತು ಅಭ್ಯರ್ಥಿಗಳಿಗೆ ಯಾವಾಗ ನೇಮಕಾತಿ ಆದೇಶ ಕೊಡಲಿದೆ ?

# ಹುಬ್ಬಳ್ಳಿ–ಧಾರವಾಡ ಮಹಾನಗರದಲ್ಲಿನ ಹಂದಿಗಳ ನಿಯಂತ್ರಣ ಕುರಿತು

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–**

೩೨೪ (೧೩೦) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹುಬ್ಬಳ್ಳಿ–ಧಾರವಾಡ ಮಹಾನಗರದಲ್ಲಿ ಹಂದಿಗಳ ಕಾಟ ಹೆಚ್ಚಾಗಿದ್ದು, ಜನರಿಗೆ ಅನೇಕ ರೀತಿಯಿಂದ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಇದನ್ನು ನಿಯಂತ್ರಿಸಲು ಮಹಾನಗರ ಪಾಲಿಕೆ ಏನು ಕ್ರಮ ತೆಗೆದುಕೊಂಡಿದೆ ;

(ಆ) ಅವಳಿ ನಗರದಲ್ಲಿ ೨೫೦೦೦ಕ್ಕಿಂತ ಅಧಿಕ ಹಂದಿಗಳಿದ್ದು ಕಳೆದ ೧ ವರ್ಷದಿಂದ ಇಲ್ಲಿಯವರೆಗೆ ರಸ್ತೆಗಳಲ್ಲಿ ಹಂದಿಗಳು ದಾಳಿ ಮಾಡಿರುವುದರಿಂದ ಸುಮಾರು ೧೫ ರಿಂದ ೨೦ ಜನ ಪ್ರಾಣ ಕಳೆದುಕೊಂಡಿದ್ದು ನಿಜವೇ ;

(ಇ) ಕಳೆದ ಅನೇಕ ವರ್ಷಗಳಿಂದ ಹಂದಿಗಳ ನಿಯಂತ್ರಣ ಕಾರ್ಯಾಚರಣೆ ಮಾಡಿ ಅರ್ಧಕ್ಕೆ ಕಾರ್ಯಾಚರಣೆ ನಿಲ್ಲಿಸಲು ಕಾರಣವೇನು ; ಶಾಲೆಗೆ ಹೋಗುತ್ತಿರುವ ಮಕ್ಕಳು, ಮಹಿಳೆಯರಿಗೆ ಹಾಗೂ ವೃದ್ಧರ ಮೇಲೆ ದಾಳಿ ಮಾಡಿದ್ದು, ಈ ಬಗ್ಗೆ ಸಾರ್ವಜನಿಕರು ದೂರು ಕೊಟ್ಟರೂ ಸಹ ಕ್ರಮ ಕೈಗೊಳ್ಳದಿರಲು ಕಾರಣಗಳೇನು ?

## ಪಾಲಿಕೆಗೆ ಮಂಜೂರಾದ ಅನುದಾನ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಪದವೀಧರರ ಕ್ಷೇತ್ರ):–**

೩೨೫ (೪೦೭) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಜಯಪುರ ಮಹಾನಗರ ಪಾಲಿಕೆಗೆ ೨೦೧೩ ರಿಂದ ಇಲ್ಲಿಯವರೆಗೆ ಯಾವ ಯಾವ ಯೋಜನೆ ಅಡಿ ಎಷ್ಟು ಅನುದಾನ ಮಂಜೂರಾಗಿದೆ ; (ಯೋಜನೆವಾರು, ವರ್ಷವಾರು ಮಾಹಿತಿ ನೀಡುವುದು)

(ಆ) ಮಂಜೂರಾದ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಹಣ ಖರ್ಚಾಗಿದೆ ; ಉಳಿದ ಹಣ ಎಷ್ಟು ; (ಕಾಮಗಾರಿಗಳ ವಿವರ ನೀಡುವುದು)

(ಇ) ನಗರದ ಗುಂಟಾ ಪ್ಲಾಟುಗಳಿಂದ ಪಾಲಿಕೆಗೆ ಯಾವುದೇ ಆದಾಯವಿರದಿದ್ದರೂ, ಆದಾಯ ಇರತಕ್ಕ ಬಡಾವಣೆಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಸಿ.ಸಿ.ರಸ್ತೆ, ಒಳಚರಂಡಿ, ವಿದ್ಯುತ್ ದೀಪಗಳನ್ನು ಖಾಸಗಿಯವರ ಒತ್ತಡಕ್ಕೆ ಮಣಿದು, ಗುಂಟಾ ಜಾಗಗಳಲ್ಲಿ ಕಾಮಗಾರಿಗಳನ್ನು ಕೈಕೊಂಡಿದೆ ಎಂಬ ಆರೋಪ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರವು ತೆಗೆದುಕೊಂಡ ಕ್ರಮವೇನು ;

(ಈ) ಪಾಲಿಕೆಯ ಅನುದಾನವನ್ನು ಕೆಲವು ಸದಸ್ಯರು ತಮ್ಮ ಸ್ವಂತ ಜಾಗಗಳಲ್ಲಿ ಬಳಕೆ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ತೆಗೆದುಕೊಂಡ ಕ್ರಮವೇನು ? (ವಿವರವಾದ ಮಾಹಿತಿ ನೀಡುವುದು)

## ಸ್ಮಾರ್ಟ್ ಸಿಟಿ ಘೋಷಿಸಿರುವ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)::–**

೩೨೬ (೪೦೬) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಎಷ್ಟು ನಗರಗಳನ್ನು ಸ್ಮಾರ್ಟ್‌ಸಿಟಿ ಎಂದು ಘೋಷಿಸಲಾಗಿದೆ ; (ವಿವರವಾದ ಮಾಹಿತಿ ನೀಡುವುದು)

(ಆ) ವಿಜಯಪುರ ನಗರವನ್ನು ಸ್ಮಾರ್ಟ್‌ಸಿಟಿ ಯೋಜನೆಯಡಿ ಸೇರ್ಪಡೆ ಮಾಡಲು ಕೋರಿ ಸರ್ಕಾರವು ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ ? (ವಿವರವಾದ ಮಾಹಿತಿ ನೀಡುವುದು)

## ಪಾಲಿಕೆಗೆ ತೆರಿಗೆ ಹಣ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಪದವೀಧರರ ಕ್ಷೇತ್ರ):–**

೩೨೭ (೪೦೫) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಜಯಪುರ ನಗರದಲ್ಲಿ ಮುಸ್ಲಿಂ ಕ್ರಿಶ್ಚಿಯನ್ ಸಮುದಾಯದ ಕಲ್ಯಾಣ ಮಂಟಪ ಶಾದಿ ಮಹಲ್ ಹಾಗೂ ಅವುಗಳ ಮಳಿಗೆಗಳಿಂದ ಪಾಲಿಕೆಗೆ ತೆರಿಗೆ ಸಂದಾಯವಾಗಿದೆಯೇ ;

(ಆ) ಸಂದಾಯವಾಗಿದ್ದಲ್ಲಿ, ಪ್ರತಿಯೊಂದು ಸಮುದಾಯದ ಕಟ್ಟಡಗಳಿಂದ ಕಳೆದ ೫ ವರ್ಷಗಳಲ್ಲಿ ಎಷ್ಟು ತೆರಿಗೆ ಹಣ ಬಂದಿದೆ ; ಇದಕ್ಕೆ ಅನುಸರಿಸಿದ ಮಾನದಂಡಗಳೇನು ; (ಕಟ್ಟಡವಾರು ವಿವರವಾದ ಮಾಹಿತಿ ನೀಡುವುದು)

(ಇ) ಕಳೆದ ೨ ವರ್ಷಗಳಲ್ಲಿ ಪಾಲಿಕೆಗೆ ವಸೂಲಿಯಾದ ತೆರಿಗೆ ಎಷ್ಟು; ಈ ತೆರಿಗೆಯ ಹಣವನ್ನು ಯಾವ ಉದ್ದೇಶಕ್ಕಾಗಿ ಬಳಸಲಾಗಿದೆ; ಬಳಸಲಾಗಿರುವ ಹಣ ಎಷ್ಟು; ಉಳಿದಿರುವ ಹಣವೆಷ್ಟು? (ಸಂಪೂರ್ಣವಾದ ಮಾಹಿತಿ ನೀಡುವುದು)

## ವಿಜಯಪುರ ನಗರದಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಮೀಸಲಿಟ್ಟ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಪದವೀಧರರ ಕ್ಷೇತ್ರ):–**

೩೨೮ (೪೦೪) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಜಯಪುರ ನಗರದಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಉದ್ಯಾನವನ, ಶಾಲೆ; ಪೊಲೀಸ್ ಠಾಣೆ, ಗ್ರಂಥಾಲಯ ಇತ್ಯಾದಿಗಳಿಗಾಗಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಮೀಸಲಿರಿಸಿದ ಜಾಗ ಎಷ್ಟು; (ಸರ್ವೆ ನಂಬರ್ ಸಹಿತ ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಸದರಿ ಜಾಗಗಳು ಖಾಸಗಿಯವರಿಂದ ಅತಿಕ್ರಮಣವಾಗಿದೆ ಎಂಬ ಗಂಭೀರ ಆರೋಪ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವುಗಳ ತೆರವಿಗಾಗಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಇ) ನಗರದ ಪ್ರಾಧಿಕಾರದ ಸ್ವಂತ ಜಾಗಕ್ಕೆ ರಿಜಿಸ್ಟರ್ ನಂಬರ್ ವಾರ್ಡ್ ನಂ.೧೭ ಸಿಟಿಎಸ್ ನಂ.೮೭೨/ಇ, ೮೭೨/ಬ, ಪ್ಲಾಟ್ ನಂ.೨೩, ೮೬೯/ಕ ಪ್ಲಾಟ್ ನಂ.೧ ಗಳಲ್ಲಿ ಖಾಸಗಿಯವರಿಂದ ಮನೆ ಹಾಗೂ ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟಿರುವುದು ಸರ್ಕಾರದ ಗಮನಕ್ಕೆ

ಬಂದಿದೆಯೇ; ಬಂದಿದ್ದಲ್ಲಿ, ಇವುಗಳನ್ನು ತೆರವುಗೊಳಿಸಿ ಸಂಬಂಧಿಸಿದವರ ಮೇಲೆ ಕಾನೂನು ಕ್ರಮಗಳನ್ನು ಜರುಗಿಸಲು ಸರ್ಕಾರ ಮುಂದಾಗುವುದೇ ? (ವಿವರವಾದ ಮಾಹಿತಿ ನೀಡುವುದು)

## ಸಣ್ಣ ಪತ್ರಿಕೆಗಳನ್ನು ಪ್ರೋತ್ಸಾಹಿಸುವ ಕುರಿತು

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೩೨೯ (೪೮೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೩ ರಲ್ಲಿ ಸರ್ಕಾರ ಘೋಷಿಸಿರುವ ಜಾಹೀರಾತು ನೀತಿ ಸಮರ್ಪಕವಾಗಿ ಜಾರಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಸಣ್ಣ ಪತ್ರಿಕೆಗಳನ್ನು ಪ್ರೋತ್ಸಾಹಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಪರವಾನಗಿ ಇಲ್ಲದೆ ಸಾರಾಯಿ ಬಾಟಲುಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೩೩೦ (೪೭೨) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೬–೧೭ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಮದ್ಯದ ಅಂಗಡಿ (Wineshops) ಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ರಾಯಚೂರು ಜಿಲ್ಲೆಯಾದ್ಯಂತ ಸಾರಾಯಿ ಬಾಟಲಿಗಳನ್ನು ಪರವಾನಗಿ (CL-2 Licence) ಇಲ್ಲದೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿಲ್ಲದ್ದಲ್ಲಿ, ಪರವಾನಗಿ ಇಲ್ಲದೆ ಮಾರಾಟಕ್ಕೆ ಕಡಿವಾಣ ಹಾಕಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ರಾಯಚೂರು ನಗರದಲ್ಲಿರುವ ಕೇಂದ್ರ ಕಾರಾಗೃಹವನ್ನು ಹೊರ ಪ್ರದೇಶಕ್ಕೆ ಸ್ಥಳಾಂತರಿಸುವ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೩೩೧ (೪೭೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆಯಲ್ಲಿ ನೂತನವಾಗಿ ಸಂಚಾರಿ ಪೊಲೀಸ್ ಠಾಣೆಗಳನ್ನು (Traffic Police Station) ಸ್ಥಾಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ರಾಯಚೂರು ನಗರದಲ್ಲಿ ಪ್ರಸ್ತುತ ಇರುವ ಜಿಲ್ಲಾ ಕೇಂದ್ರ ಕಾರಾಗೃಹವನ್ನು ನಗರದ ಹೊರ ಪ್ರದೇಶಕ್ಕೆ ಸ್ಥಳಾಂತರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ರಾಯಚೂರು ಜಿಲ್ಲೆಯ ಪೊಲೀಸ್ ಸಿಬ್ಬಂದಿಗಳಿಗೆ ವಸತಿ ಗೃಹಗಳನ್ನು ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಮಾನ್ವಿ ಪಟ್ಟಣಕ್ಕೆ ಪ್ರಸ್ತುತವಾಗಿ ಕುಡಿಯುವ ನೀರಿನ ತೊಂದರೆ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೩೩೨ (೪೭೩) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಾನ್ವಿ ಪಟ್ಟಣಕ್ಕೆ ಕುಡಿಯುವ ನೀರಿಗಾಗಿ ೨೦೦೫ರಲ್ಲಿ ಆಡಳಿತಾತ್ಮಕ ಅನುಮೋದನೆ ಸಿಕ್ಕಿರುವ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಮಾನ್ವಿ ಪಟ್ಟಣಕ್ಕೆ ಪ್ರಸ್ತುತ ಕುಡಿಯುವ ನೀರಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ರಾಯಚೂರು ನಗರಕ್ಕೆ ಕುಡಿಯುವ ನೀರಿಗಾಗಿ ಮಂಜೂರಾಗಿರುವ ೨೪/೭ ಯೋಜನೆಯನ್ನು ತ್ವರಿತಗತಿಯಲ್ಲಿ ಜಾರಿಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಬೆಂಗಳೂರು ಜಲಮಂಡಳಿಯಲ್ಲಿ ನೌಕರರ ವೇತನ ಶ್ರೇಣಿಗಳ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೩೩೩ (೪೭೭) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಜಲಮಂಡಳಿಯಲ್ಲಿ ಎಷ್ಟು ನೌಕರರು ಕೆಲಸ ಮಾಡುತ್ತಿದ್ದಾರೆ ;

(ಆ) ಈ ಸಿಬ್ಬಂದಿಗೆ ಯಾವ ವೇತನ ಶ್ರೇಣಿಯನ್ನು ನೀಡಲಾಗುತ್ತಿದೆ ;

(ಇ) ಈ ವೇತನ ಶೇಣಿಗಳನ್ನು ನಿರ್ಧರಿಸಲು ಯಾವ ಮಾನದಂಡಗಳನ್ನು ನಿಗಧಿಪಡಿಸಲಾಗಿದೆ ;

(ಈ) ರಾಜ್ಯ ಸರ್ಕಾರದ ವೇತನ ಶ್ರೇಣಿಗಳಿಗಿಂತ ಹೆಚ್ಚಿನ ವೇತನ ಶ್ರೇಣಿಗಳನ್ನು ಈ ಸಿಬ್ಬಂದಿಗೆ ನೀಡಲಾಗುತ್ತಿರುವುದು ನಿಜವೇ ;

(ಉ) ಹಾಗಿದ್ದಲ್ಲಿ, ಈ ರೀತಿ ಹೆಚ್ಚಿನ ವೇತನ ಶ್ರೇಣಿಯನ್ನು ಈ ಸಿಬ್ಬಂದಿಗೆ ನೀಡಲು ಇರುವ ವೈಜ್ಞಾನಿಕ ಹಾಗೂ ಆಡಳಿತಾತ್ಮಕ ಕಾರಣಗಳೇನು ?

## ನೇಮಕಾತಿಯಲ್ಲಿನ ರೋಸ್ಟರ್ ಬಿಂದುಗಳ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೩೩೪ (೪೭೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರಿ ಇಲಾಖೆ/ನಿಗಮ/ಅನುದಾನಿತ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬುವಾಗ ಹಾಲಿ ಜಾರಿಯಲ್ಲಿರುವ ನೇಮಕಾತಿ ವಿಧಾನಗಳಾವುವು ; (ವಿವರವಾದ ಮಾಹಿತಿ ನೀಡುವುದು)

(ಆ) ನೇರ ನೇಮಕಾತಿಗೂ, ಹಾಗೂ ಇತರೆ ನೇಮಕಾತಿಗೂ ಇರುವ ವ್ಯತ್ಯಾಸವೇನು ;

(ಇ) ನೇಮಕಾತಿಗಳಲ್ಲಿ ನೇರ ಹಾಗೂ ಸಮತಲ ಮೀಸಲಾತಿ ಅಂದರೆ ಏನು ; ಇವುಗಳಲ್ಲಿ ಬರುವ ಪ್ರವರ್ಗಗಳು ಯಾವುವು ; (ವಿವರವಾದ ಮಾಹಿತಿ ನೀಡುವುದು)

(ಈ) ಯಾವ ನೇಮಕಾತಿಗಳಲ್ಲಿ ರೋಸ್ಟರ್ ಬಿಂದುಗಳನ್ನು ಅನುಸರಿಸಬೇಕು ; ಈ ನಿಯಮಗಳು ಯಾವಾಗಿನಿಂದ ಜಾರಿಗೆ ಬಂದಿವೆ ; ರೋಸ್ಟರ್ ಬಿಂದುಗಳನ್ನು ಒಳಗೊಂಡಂತೆ ಇಲ್ಲಿಯವರೆಗೂ ಇದರ ಸಂಬಂಧ ಹೊರಡಿಸಿರುವ ಸರ್ಕಾರಿ ಆದೇಶದ ಪ್ರತಿಗಳನ್ನು ನೀಡುವುದು ;

(ಉ) ಪ್ರವರ್ಗ ೩ಎ ರೋಸ್ಟರ್ ಬಿಂದುವಿನಲ್ಲಿ ಕ್ರಮಸಂಖ್ಯೆ ೧೭ರಲ್ಲಿ ಇಡಲು ಕಾರಣಗಳೇನು ; ಈ ವರ್ಗವನ್ನು ಕ್ರಮ ಸಂಖ್ಯೆ ೩ ಅಥವಾ ೪ರಲ್ಲಿ ಏಕೆ ಇಡಲಾಗಿಲ್ಲ ? (ಸ್ಪಷ್ಟೀಕರಣದೊಂದಿಗೆ ವಿವರವಾದ ಮಾಹಿತಿ ನೀಡುವುದು)

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪೌರಕಾರ್ಮಿಕರನ್ನು ಖಾಯಂಗೊಳಿಸುವ ಬಗ್ಗೆ

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೩೩೫ (೪೮೧) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳೆಷ್ಟು ; ದಿನಾಂಕ: ೦೧.೦೭.೨೦೧೪ರಂದು ಎಷ್ಟು ಹುದ್ದೆಗಳನ್ನು ತುಂಬಲು ಅರ್ಜಿ ಕರೆಯಲಾಗಿತ್ತು ;

(ಆ) ಇಲಾಖೆಗೆ ಬಂದ ಅರ್ಜಿಗಳು ಎಷ್ಟು ; ಇವುಗಳಿಂದ ಬಂದ ಅರ್ಜಿ ಶುಲ್ಕವೆಷ್ಟು ; (ಎಸ್.ಸಿ. ಎಸ್.ಟಿ., ಇತರೆಗಳೊಂದಿಗೆ ವಿವರವಾದ ಮಾಹಿತಿ ಕೊಡುವುದು)

(ಇ) ಹಾಲಿ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಖಾಯಂ ಮಾಡುವಂತೆ ಮಾನ್ಯ ಉಚ್ಚ ನ್ಯಾಯಾಲಯದಿಂದ ಆದೇಶ ಬಂದಿರುವುದು ನಿಜವೇ ; (ನ್ಯಾಯಾಲಯದ ಪ್ರತಿ ನೀಡುವುದು)

(ಈ) ಸದರಿ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆಯೇ ; ಸ್ಥಗಿತಗೊಳಿಸಲಾಗಿದ್ದರೆ, ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಅವರು ತುಂಬಿದ ಅರ್ಜಿ ಶುಲ್ಕವನ್ನು ಯಾವ ರೀತಿ ಮತ್ತು ಯಾವಾಗ ಹಿಂದುರುಗಿಸಲಾಗುವುದು ? (ವಿವರವಾದ ಮಾಹಿತಿ ನೀಡುವುದು)

## ಕಾವೇರಿ ಗಲಾಟೆಯಲ್ಲಿನ ಮೊಕದ್ದಮೆಗಳನ್ನು ಹಿಂಪಡೆಯುವ ಬಗ್ಗೆ

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೩೩೬ (೪೮೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಇತ್ತೀಚೆಗೆ ನಡೆದ ಕಾವೇರಿ ಗಲಾಟೆಯಲ್ಲಿ ಪೊಲೀಸ್ ವಿನಾಕಾರಣ ಅಮಾಯಕ ಜನರ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಿರುವುದು ನಿಜವೇ ;

(ಆ) ಈ ಕ್ರಮದಿಂದ ಮಾನವ ಹಕ್ಕುಗಳನ್ನು ರಕ್ಷಿಸಬೇಕಾದ ಸರ್ಕಾರವೇ ಹರಣ ಮಾಡಿರುವುದು ಸರಿಯೇ ;

(ಇ) ಬೆಂಗಳೂರಿನ ರಾಜಗೋಪಾಲ ನಗರ ಪೊಲೀಸ್ ಠಾಣೆಯಲ್ಲಿ ಒಂದೇ ಕುಟುಂಬದ ಅಣ್ಣ ತಮ್ಮಂದಿರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಿರುವುದು ಸರಿಯೇ ; ಇವರ ಮೇಲೆ ದಾಖಲು ಮಾಡಲಾದ ಮೊಕದ್ದಮೆಗಳಾವುವು ; (ಎಫ್.ಐ.ಆರ್ ಪ್ರತಿಯೊಂದಿಗೆ ವಿವರವಾದ ಮಾಹಿತಿ ನೀಡುವುದು)

(ಈ) ಕಾವೇರಿ ಗಲಾಟೆಯಲ್ಲಿ ವಿನಾಕಾರಣ ಅಮಾಯಕ ಜನರ ಮೇಲೆ ದಾಖಲಿಸಿರುವ ಕ್ರಿಮಿನಲ್ ಮೊಕದ್ದಮೆಗಳನ್ನು ಸರ್ಕಾರವು ಯಾವಾಗ ಹಿಂಪಡೆದುಕೊಳ್ಳುವುದು ; (ವಿವರವಾದ ಮಾಹಿತಿ ಕೊಡುವುದು)

(ಉ) ಸರ್ಕಾರವು ತಪ್ಪಿತಸ್ಥ ಪೊಲೀಸ್‌ರ ಮೇಲೆ ಯಾವ ಕ್ರಮ ಕೈಗೊಂಡಿದೆ ?

## ರೇಸ್‌ಕೋರ್ಸ್ ಸ್ಥಳಾಂತರ

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೩೭ (೪೮೪) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ರೇಸ್‌ಕೋರ್ಸ್‌ನ್ನು ನಗರದಿಂದ ಹೊರವಲಯಕ್ಕೆ ಸ್ಥಳಾಂತರಗೊಳಿಸಲು ಸರ್ಕಾರ ಹಿಂದೆಯೇ ತೀರ್ಮಾನ ತೆಗೆದುಕೊಂಡಿದ್ದರೂ, ಅದು ಕಾರ್ಯಗತವಾಗದಿರಲು ಕಾರಣವೇನು ;

(ಆ) ರೇಸ್ ಪಂದ್ಯ ಆಡಿ ಅನೇಕ ಕುಟುಂಬಗಳು ಹಾಳಾಗುತ್ತಿರುವುದರಿಂದ, ಸಮಾಜದ ಹಿತದೃಷ್ಟಿಯಿಂದ ರೇಸ್‌ಕೋರ್ಸ್‌ನ್ನು ನಗರದ ಮಧ್ಯಭಾಗದಿಂದ ಹೊರವಲಯಕ್ಕೆ ಕೂಡಲೇ ಸ್ಥಳಾಂತರಿಸಲು ಕ್ರಮ ಕೈಗೊಳ್ಳುತ್ತೀರಾ ;

(ಇ) ಹಾಲಿ ರೇಸ್‌ಕೋರ್ಸ್‌ನ್ನು ಸ್ಥಳಾಂತರಿಸಿ ಆ ಜಾಗದಲ್ಲಿ ಅಮ್ಯೂಸ್ಮೆಂಟ್ ಪಾರ್ಕ್ (ಪ್ರವಾಸಿ ತಾಣ) ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಉದ್ಯಾನವನಗಳಲ್ಲಿ ಮನರಂಜನೆ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೩೮ (೪೮೩) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಗರದ ಕೆಲವು ಪ್ರಮುಖ ಉದ್ಯಾನವನಗಳಲ್ಲಿ ಆರ್ಕೆಷ್ಟ್ರಾ ವ್ಯವಸ್ಥೆ ಮಾಡಿ, ನಾಗರಿಕರಿಗೆ ಮನರಂಜನೆ ನೀಡುವ ಪದ್ಧತಿ ಈ ಹಿಂದೆ ಇದ್ದು, ಅದನ್ನು ಮುಂದುವರೆಸಲು ಕ್ರಮ ಕೈಗೊಳ್ಳಲಾಗುವುದೇ ;

(ಆ) ಆಯ್ದ ಪ್ರಮುಖ ಉದ್ಯಾನವನಗಳಲ್ಲಿ ಭಾನುವಾರ ಮತ್ತು ಇತರೆ ವಿಶೇಷ ದಿನಗಳಲ್ಲಿ ಕನ್ನಡ ಗೀತೆಗಳು, ಜಾನಪದ ಗೀತೆಗಳು ಹಾಗೂ ದೇಶ ಭಕ್ತಿ ಗೀತೆಗಳನ್ನು ಹಾಡಿಸುವ ಕಾರ್ಯಕ್ರಮಗಳನ್ನು ಏರ್ಪಾಡು ಮಾಡಲು ಕ್ರಮ ಕೈಗೊಳ್ಳಲಾಗುವುದೆ ?

## ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿ

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೩೯ (೪೮೭) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿದಿನ ಸಂಗ್ರಹವಾಗುವ ಘನತ್ಯಾಜ್ಯದ ಪ್ರಮಾಣವೆಷ್ಟು ;

(ಆ) ಅದರ ವಿಲೇವಾರಿ ಮತ್ತು ಸಂಸ್ಕರಣೆ ಸಮರ್ಪಕವಾಗಿ ಆಗುತ್ತಿದೆಯೇ ; ಇದಕ್ಕೆ ಯಾವ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ ;

(ಇ) ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಯೋಜನೆಯನ್ನೇನಾದರೂ ರೂಪಿಸಲಾಗಿದೆಯೇ ? (ವಿವರಗಳನ್ನು ನೀಡುವುದು)

## ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಮೂಲಕ ನೆರವು ನೀಡುವ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೪೦ (೪೨೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನಾಂಗದವರಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಹಾಗೂ ಇತರೆ ಸರ್ಕಾರದ ಸಂಸ್ಥೆಗಳ ಮೂಲಕ ಕೈಗಾರಿಕೆ ಸ್ಥಾಪನೆಗೆ ಹಣ ಕಾಸಿನ ನೆರವು ನೀಡುತ್ತಿರುವಂತೆ ಹಿಂದುಳಿದ ವರ್ಗ, ಅಲ್ಪಸಂಖ್ಯಾತರಿಗೆ ಕೈಗಾರಿಕೆ ಸ್ಥಾಪನೆಗೆ ಹಣಕಾಸಿನ ಸಹಾಯ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ;

(ಆ) ಇದ್ದಲ್ಲಿ, ಯಾವ ಸರ್ಕಾರಿ ಹಣಕಾಸಿನ ಸಂಸ್ಥೆಗಳ ಮೂಲಕ ನೆರವು ನೀಡಲಾಗುವುದು ?

## 'ಜಿ' ಕೆಟಗರಿ ನಿವೇಶನಗಳ ಬಗ್ಗೆ

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೪೧ (೧೬೭) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 'ಜಿ' ಕೆಟಗರಿಯಲ್ಲಿ ೨೦೦೦ನೇ ಇಸವಿಯಿಂದ ಇಲ್ಲಿಯವರೆಗೆ ಹಂಚಿಕೆ ಮಾಡಿರುವ ನಿವೇಶನಗಳ ಸಂಖ್ಯೆ ಎಷ್ಟು ; (ಪೂರ್ಣ ಮಾಹಿತಿ ನೀಡುವುದು)

(ಆ) ಈ ಪೈಕಿ ಕೋರ್ಟ್ ವ್ಯಾಜ್ಯಗಳಿಂದಾಗಿ ಮೂಲ ಹಂಚಿಕೆಯಾದ ನಿವೇಶನಗಳಿಗೆ ಬದಲಾಗಿ ಬದಲಿ ನಿವೇಶನಗಳನ್ನು ಪಡೆದುಕೊಂಡವರ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಕೋರ್ಟ್ ವ್ಯಾಜ್ಯಗಳಿಂದ ಕೂಡಿರುವ ನಿವೇಶನಗಳ ಸಂಖ್ಯೆ ಹಾಗೂ ಕೋರ್ಟ್ ವ್ಯಾಜ್ಯಗಳಿಂದ ಕೂಡಿರದ, ಹಂಚಿಕೆ ಮಾಡಲು ಯೋಗ್ಯವಾದ, ಪ್ರಾಧಿಕಾರದ ಸ್ವಾಧೀನದಲ್ಲಿರುವ ನಿವೇಶನಗಳ ಸಂಖ್ಯೆ ಎಷ್ಟು ; ಅವು ಯಾವುವು;

(ಈ) ಈ ರೀತಿ ಹಂಚಿಕೆ ಮಾಡಲು ಯೋಗ್ಯವಾದ ನಿವೇಶನಗಳನ್ನು ೨೦೦೦ನೇ ಇಸವಿಯಿಂದ 'ಜಿ' ಕೆಟಗರಿಯಲ್ಲಿ ನಿವೇಶನ ಮಂಜೂರಾಗಿದ್ದರೂ ಕ್ರಯಪತ್ರ ನೋಂದಣಿ ಮಾಡಿಸಿಕೊಂಡಿದ್ದರೂ ಹಂಚಿಕೆಯಾಗದೇ ಕಾಯುತ್ತಿರುವವರಿಗೆ ಕೂಡಲೇ ಮರುಹಂಚಿಕೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಸ್ಪರ್ಧಾತ್ಮಕ ಪರೀಕ್ಷಾ ಅಭ್ಯರ್ಥಿಗಳಿಗೆ ತರಬೇತಿ ಕೇಂದ್ರಗಳನ್ನು ತೆರೆಯುವ ಬಗ್ಗೆ

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೪೨ (೪೫೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಯು.ಪಿ.ಎಸ್.ಸಿ., ಕೆ.ಪಿ.ಎಸ್.ಸಿ. ಅಂತಹ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿಯನ್ನು ನೀಡಲು ರಾಜ್ಯ ಸರ್ಕಾರ ತೆರೆದಿರುವ ಸ್ಟಡಿ ಸೆಂಟರ್‌ಗಳ ಸಂಖ್ಯೆ ಎಷ್ಟು ;

(ಆ) ರಾಜ್ಯದ ಬಡ ಮತ್ತು ಗ್ರಾಮೀಣ ಭಾಗದ ಪ್ರತಿಭಾನ್ವಿತ ಅಭ್ಯರ್ಥಿಗಳು ಯು.ಪಿ.ಎಸ್.ಸಿ. ಪರೀಕ್ಷೆಯನ್ನು ಎದುರಿಸಲು ಅನುಕೂಲವಾಗುವಂತೆ ಜಿಲ್ಲಾ ಮಟ್ಟದಲ್ಲಿ ಸರ್ಕಾರದಿಂದ ತರಬೇತಿ ಕೇಂದ್ರಗಳನ್ನು ತೆರೆಯುವ ಯೋಜನೆ ಸರ್ಕಾರಕ್ಕಿದೆಯೇ ;

(ಇ) ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳ ರಾಜ್ಯಗಳ ಮಾದರಿಯಲ್ಲಿ ನಮ್ಮ ರಾಜ್ಯದಲ್ಲಿಯೂ ಸ್ಟಡಿ ಸೆಂಟರ್ ತೆರೆಯುವ ಉದ್ದೇಶ ರಾಜ್ಯ ಸರ್ಕಾರಕ್ಕಿದೆಯೇ ?

## ಆಫ್ರಿಕನ್ ವಲಸಿಗರ ಬಗ್ಗೆ

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೪೩ (೪೫೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದಲ್ಲಿ ಅನಧಿಕೃತವಾಗಿ ಆಫ್ರಿಕನ್ ನಾಗರಿಕರು ವಾಸವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಗಮನಕ್ಕೆ ಬಂದಿದ್ದಲ್ಲಿ, ಬೆಂಗಳೂರಿನ ಯಾವ ಭಾಗದಲ್ಲಿ ಆಫ್ರಿಕನ್ ನಾಗರಿಕರು ಹೆಚ್ಚು ವಾಸಿಸುತ್ತಿದ್ದಾರೆ ;

(ಇ) ಆಫ್ರಿಕನ್ ನಾಗರಿಕರಿಂದ ಬೆಂಗಳೂರಿನಲ್ಲಿ ಹೆಚ್ಚಾಗುತ್ತಿರುವ ದಾಂಧಲೆಯನ್ನು ಹತ್ತಿಕ್ಕಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್‌ರವರು ಅಕ್ರಮ ಹಾಗೂ ಅನಧಿಕೃತವಾಗಿ ಕಬಳಿಸಿರುವ ಪ್ರಾಧಿಕಾರದ ಜಮೀನುಗಳನ್ನು ವಶಪಡಿಸಿಕೊಳ್ಳುವ ಬಗ್ಗೆ

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ), ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ), ಶ್ರೀ ಟಿ.ಎ.ಶರವಣ (ವಿಧಾನಸಭೆಯಿಂದ ಚುನಾಯಿತರಾದವರು), ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೩೪೪ (೪೦೨+೪೦೮+೫೧೪) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಿಡಿಎ ಎಂಪ್ಲಾಯಿಸ್ ವೆಲ್‌ಫೇರ್ ಅಸೋಸಿಯೇಷನ್‌ಗೆ ದೊಡ್ಡಕಲ್ಲಸಂದ್ರ ಮತ್ತು ಲಿಂಗಧೀರನಹಳ್ಳಿ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿ ಪ್ರಾಧಿಕಾರದಿಂದ ಬಿಡುಗಡೆಯಾಗಿರುವ ಜಮೀನು ಎಷ್ಟು ; (ಸರ್ವೆ ನಂಬರ್‌ವಾರು, ವಿಸ್ತೀರ್ಣವಾರು ವಿವರ ನೀಡುವುದು)

(ಆ) ಎರಡು ಗ್ರಾಮಗಳ ಪ್ರಸ್ತಾವಿತ (proposal) ಮತ್ತು (revised) ಪರಿಷ್ಕೃತ ಬಡಾವಣೆ ನಕ್ಷೆಗಳಿಗೆ ಯಾವ ದಿನಾಂಕಗಳಂದು ಅನುಮೋದನೆ ನೀಡಲಾಗಿದೆ ; (ನಕ್ಷೆಗಳ ಪ್ರತಿ ಒದಗಿಸುವುದು)

(ಇ) ಪ್ರಾಧಿಕಾರದ ಕಾಯ್ದೆಯಂತೆ ಪಾರ್ಕ್‌ಗಳು, ರಸ್ತೆಗಳು, ಆಟದ ಮೈದಾನ ಮತ್ತು ಸಿ.ಎ. ನಿವೇಶನಗಳನ್ನು ರಚಿಸಲಾಗಿದೆಯೇ ; (ಪ್ರಾಧಿಕಾರದ ಕಾಯ್ದೆಯ ಪ್ರತಿ ಮತ್ತು ಪ್ರತಿ ಪಾರ್ಕ್, ರಸ್ತೆ,

ಆಟದ ಮೈದಾನ ಮತ್ತು ಸಿ.ಎ. ನಿವೇಶನಗಳ ವಿಸ್ತೀರ್ಣವಾರು ವಿವರ ನೀಡುವುದು) ಇವುಗಳೆಲ್ಲವೂ ಪ್ರಾಧಿಕಾರದ ವಶದಲ್ಲಿವೆಯೇ; (ಇದರ Relinquishment Deed & Rectification Deed ಪ್ರತಿ ಒಸದಿಸುವುದು)

(ಈ) ದೊಡ್ಡಕಲಸಂದ್ರದ ಸ.ನಂ.೧೯(ಪಿ)ರಲ್ಲಿನ ೧ ಎಕರೆ ೨೮ ಗುಂಟೆ ಜಮೀನು ಮತ್ತು ಲಿಂಗಧೀರನಹಳ್ಳಿಯ ಸ.ನಂ. ೧/೪ರಲ್ಲಿನ ಜಮೀನುಗಳನ್ನು ಅಸೋಸಿಯೇಷನ್ ಅಕ್ರಮವಾಗಿ ಉಪಯೋಗಿಸಿಕೊಂಡಿರುವುದು ನಿಜವೇ ; ಇದ್ದಲ್ಲಿ, ಈ ಜಮೀನನ್ನು ವಾಪಸ್ಸು ಪಡೆಯಲು ಕೈಗೊಂಡಿರುವ ಕ್ರಮಗಳೇನು ; ಇಲ್ಲದಿದ್ದಲ್ಲಿ, ಜಮೀನಿನ ಕ್ರಯಪತ್ರಗಳನ್ನು ಒದಗಿಸುವುದು ;

(ಉ) ಲಿಂಗಧೀರನಹಳ್ಳಿಯ ಸ.ನಂ. ೬(ಪಿ)ರಲ್ಲಿನ ೩೮೩೩.೯೨ ಚದರ.ಮೀ (ಸುಮಾರು ೦೧ ಎಕರೆ) ವಿಸ್ತೀರ್ಣದ ಸಿ.ಎ. ನಿವೇಶನವನ್ನು ಅಸೋಸಿಯೇಷನ್‌ನವರು ಅಕ್ರಮವಾಗಿ ಖಾಸಗಿ ವ್ಯಕ್ತಿಗೆ ಮಾರಾಟ ಮಾಡಿರುವುದು ನಿಜವೇ ; ಇದ್ದಲ್ಲಿ, ಪ್ರಾಧಿಕಾರದ ಈ ಸ್ವತ್ತನ್ನು ವಾಪಸ್ಸು ಪಡೆಯಲು ಕೈಗೊಂಡಿರುವ ಅಥವಾ ಕೈಗೊಳ್ಳುವ ಕ್ರಮಗಳೇನು ;

(ಊ) ಸದರಿ ಎರಡೂ ಗ್ರಾಮಗಳ ಬಡಾವಣೆ ನಕ್ಷೆಗಳನ್ನು ಅಸೋಸಿಯೇಷನ್‌ನವರೊಡನೆ ಶಾಮೀಲಾಗಿ ರಚಿಸಿರುವ ಪ್ರಾಧಿಕಾರದ ಅಧಿಕಾರಿ/ನೌಕರರ ವಿರುದ್ಧ ಕೈಗೊಂಡ ಕ್ರಮಗಳ ವಿವರ ನೀಡುವುದು ; ಇಲ್ಲದಿದ್ದಲ್ಲಿ, ಪ್ರಾಧಿಕಾರದ ಸ್ವತ್ತುಗಳನ್ನು ವಾಪಸ್ಸು ಪಡೆಯಲು ಮತ್ತು ಅವ್ಯವಹಾರದಲ್ಲಿ ಭಾಗಿಯಾದವರ ವಿರುದ್ಧ ಕೈಗೊಳ್ಳುವ ಕ್ರಮಗಳೇನು ?

## ರಾಜ್ಯದಲ್ಲಿರುವ ಪೊಲೀಸ್ ಠಾಣೆಗಳ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೩೪೫ (೪೩೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಒಟ್ಟು ಪೊಲೀಸ್ ಠಾಣೆಗಳೆಷ್ಟು ; ಆ ಪೈಕಿ ಎಷ್ಟು ಠಾಣೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ ; ಎಷ್ಟು ಪೊಲೀಸ್ ಠಾಣೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ ;

(ಆ) ಮಹಿಳಾ ಮತ್ತು ಪುರುಷ ಸಿಬ್ಬಂದಿಗಳಿಗೆ ಪ್ರತ್ಯೇಕ ಶೌಚಾಲಯ ಸೌಲಭ್ಯವನ್ನು ಎಷ್ಟು ಪೊಲೀಸ್ ಠಾಣೆಗಳು ಹೊಂದಿದೆ ;

(ಇ) ಮಹಿಳಾ ಸಿಬ್ಬಂದಿಗಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇಲ್ಲದೇ ಇರುವುದರಿಂದ ಮಹಿಳಾ ಪೊಲೀಸ್ ಸಿಬ್ಬಂದಿಗಳು ಸಮಸ್ಯೆಗಳನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಉ) ಪೊಲೀಸ್ ಠಾಣೆಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲು ಸ್ವಚ್ಛ ಭಾರತ್ ಯೋಜನೆಯ ಮೂಲಕ ಎಷ್ಟು ಸಹಾಯಧನ ಪಡೆಯಲಾಗಿದೆ ?

## ರಾಜ್ಯದಲ್ಲಿ ವಿವಿಧ ಇಲಾಖೆಯಲ್ಲಿ ನಿವೃತ್ತರಾಗುತ್ತಿರುವ ಹಾಗೂ ನೇಮಕವಾಗುತ್ತಿರುವ ಸಿಬ್ಬಂದಿಗಳ ಸಂಖ್ಯೆ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೩೪೬ (೪೩೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ವಾರ್ಷಿಕ ಸರಾಸರಿ ನಿವೃತ್ತರಾಗುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ;

(ಆ) ರಾಜ್ಯದಲ್ಲಿ ವಿವಿಧ ಇಲಾಖೆಗಳಡಿಯಲ್ಲಿ ಸರಾಸರಿ ನೇಮಕವಾಗುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ;

(ಇ) ರಾಜ್ಯ ಸರ್ಕಾರ ಪ್ರತಿ ವರ್ಷ ಎಲ್ಲಾ ಇಲಾಖೆಗಳ ಸಿಬ್ಬಂದಿಗಳು ಸೇರಿದಂತೆ ಸಿಬ್ಬಂದಿಗಳ ಸೇವಾ ಸೌಲಭ್ಯಗಳಿಗೆ ವಾರ್ಷಿಕ ಖರ್ಚು ಮಾಡುತ್ತಿರುವ ಮೊತ್ತ ಎಷ್ಟು ; (ಕಳೆದ ೩ ವರ್ಷಗಳ ವಿವರ ನೀಡುವುದು) ಇದು ಆಯವ್ಯಯದ ಎಷ್ಟು ಪ್ರತಿಶತವಾಗಿದೆ ; (ವರ್ಷಾವಾರು ವಿವರ ನೀಡುವುದು)

(ಈ) ರಾಜ್ಯದಲ್ಲಿ ಒಟ್ಟು ಖಾಲಿ ಇರುವ ಹುದ್ದೆಗಳೆಷ್ಟು ;

(ಉ) ಈ ಖಾಲಿ ಹುದ್ದೆಗಳ ವಿರುದ್ಧ ತಾತ್ಕಾಲಿಕ ಸೇವೆಯಲ್ಲಿ ನೇಮಕ ಮಾಡಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಮತ್ತು ಅವರಿಗೆ ನೀಡಲಾಗುತ್ತಿರುವ ಒಟ್ಟು ವೇತನದ ಮೊತ್ತವೆಷ್ಟು ? (ದಿನಗೂಲಿ, ಹೊರಗುತ್ತಿಗೆ, ತಾತ್ಕಾಲಿಕ, ಅತಿಥಿ ಉಪನ್ಯಾಸಕರು ಹಾಗೂ ಇತರೆ ಖಾಯಂ ಅಲ್ಲದ ಹುದ್ದೆಗಳು ಸೇರಿದಂತೆ)

## ರಾಜ್ಯದಲ್ಲಿ ಅಕ್ರಮ ಜಾನುವಾರು ಸಾಗಾಟ ಪ್ರಕರಣಗಳ ಕುರಿತು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೩೪೭ (೪೩೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಳೆದ ಎರಡು ವರ್ಷದಲ್ಲಿ ಎಷ್ಟು ಅಕ್ರಮ ಜಾನುವಾರು ಸಾಗಾಟದ ಪ್ರಕರಣಗಳು ವರದಿಯಾಗಿವೆ ;

(ಆ) ವರದಿಯಾದ ಅಕ್ರಮ ಜಾನುವಾರು ಪ್ರಕರಣದಲ್ಲಿ ಎಷ್ಟು ಆರೋಪಿಗಳನ್ನು ಬಂಧಿಸಲಾಗಿದೆ ; ಆ ಪೈಕಿ ಎಷ್ಟು ಆರೋಪಿಗಳಿಗೆ ಶಿಕ್ಷೆಯಾಗಿದೆ ;

(ಇ) ಈ ಅಕ್ರಮ ಸಾಗಾಣಿಕೆಗಳನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

## New Pension Schemeಗೆ ಸರ್ಕಾರಿ ನೌಕರರ ಪಿಂಚಣಿ ಖಾತ್ರಿ ಹಾಗೂ ವೇತನ ತಾರತಮ್ಯ ಸರಿಪಡಿಸುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೪೮ (೪೪೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರಿ ನೌಕರರಿಗೂ ಮತ್ತು ಕೇಂದ್ರ ಸರ್ಕಾರಿ ನೌಕರರ ಸಮಾನ ಶ್ರೇಣಿಯಲ್ಲಿ ಹುದ್ದೆಯಲ್ಲಿ ವೇತನ ತಾರತಮ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ನೂತನ ಪಿಂಚಣಿ ಯೋಜನೆ (New Pension Scheme)ಗೆ ಒಳಪಡುವ ರಾಜ್ಯ ಸರ್ಕಾರಿ ನೌಕರರು ಯೋಜನೆ ವಿರೋಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ನೂತನ ಪಿಂಚಣಿ ಯೋಜನೆ (New Pension Scheme) ಗೆ ಒಳಪಡುವ ರಾಜ್ಯ ಸರ್ಕಾರಿ ನೌಕರರ ಸಂಖ್ಯೆ ಎಷ್ಟು ; (ಇಲಾಖಾವಾರು, ಜಿಲ್ಲಾವಾರು ವಿವರ ನೀಡುವುದು)

(ಈ) New Pension Scheme ಗೆ ಯೋಜನೆ ಜಾರಿಯಾದ ನಂತರ ಮೃತಪಟ್ಟ ಹಾಗೂ ಶಾಶ್ವತ ವಿಕಲಚೇತನರಾದ ನೂತನ ಪಿಂಚಣಿ ಯೋಜನೆ (New Pension Scheme)ಗೆ ಒಳಪಡುವ ರಾಜ್ಯ

ಸರ್ಕಾರಿ ನೌಕರರ ಸಂಖ್ಯೆ ಎಷ್ಟು ; ಮೃತಪಟ್ಟ ಹಾಗೂ ಶಾಶ್ವತ ವಿಕಲಚೇತನರಾದ ನೂತನ ಪಿಂಚಣಿ ಯೋಜನೆ (New Pension Scheme)ಗೆ ಒಳಪಡುವ ರಾಜ್ಯ ಸರ್ಕಾರಿ ನೌಕರರಿಗೆ ಇದುವರೆಗೆ ಯಾವ ರೀತಿಯ ಮರಣ ಉಪದಾನ ಮತ್ತು ಪಿಂಚಣಿಗಳನ್ನು ವಿತರಿಸಲಾಗಿದೆ ; ಪರಿಹಾರ ಒದಗಿಸಿದ ಹಾಗೂ ಬಾಕಿಯಿರುವ ಪ್ರಕರಣಗಳ ಸಂಖ್ಯೆ ಎಷ್ಟು ;

(ಉ) ನೂತನ ಪಿಂಚಣಿ ಯೋಜನೆ (New Pension Scheme)ಗೆ ಒಳಪಡುವ ರಾಜ್ಯ ಸರ್ಕಾರಿ ನೌಕರರ ಗೊಂದಲ ನಿವಾರಿಸುವ ಬಗ್ಗೆ ಹಾಗೂ ಸರ್ಕಾರ ಈಗಾಗಲೇ ನೀಡಿದ ಭರವಸೆಯಂತೆ ರಾಜ್ಯ ಸರ್ಕಾರಿ ನೌಕರರ ಬೇಡಿಕೆಯಾದ ೭ನೇ ವೇತನ ಆಯೋಗ ರಚನೆ ಮತ್ತು ಇನ್ನಿತರ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಸರ್ಕಾರದ ನಿಲುವೇನು ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ?

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಬಹುಮಹಡಿ ಕಟ್ಟಡಗಳ ಸುರಕ್ಷತೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೪೯ (೪೪೦) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಬಹುಮಹಡಿ ಕಟ್ಟಡಗಳ ಸಂಖ್ಯೆ ಎಷ್ಟು ; (G+1 ಗಿಂತ ಹೆಚ್ಚಿನ ವಾಣಿಜ್ಯ ಮತ್ತು ವಾಸ್ತವ್ಯ ಮಹಡಿ ಮತ್ತು ವಾರ್ಡ್‌ವಾರು ವಿವರ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ಬಹುಮಹಡಿ ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ನಡೆದ ಅವಘಡಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು) ನಿರ್ಲಕ್ಷಕರ ವಿರುದ್ಧ ಕೈಗೊಂಡ ಕ್ರಮಗಳೇನು ;

(ಇ) ಬಹುಮಹಡಿ ಕಟ್ಟಡಗಳಿಗೆ ಆಗಮಿಸುವ ಸಾರ್ವಜನಿಕರ ವಾಹನ ಪಾರ್ಕಿಂಗ್, ಅಗತ್ಯ ಸಂಖ್ಯೆಯ ಶೌಚಾಲಯದ ಲಭ್ಯತೆ ಇಲ್ಲದೆ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬಹುಮಹಡಿ ಕಟ್ಟಡಗಳಲ್ಲಿ ಸಾರ್ವಜನಿಕರಿಗೆ ಶೌಚಾಲಯ, ವಾಹನಗಳ ಪಾರ್ಕಿಂಗ್‌ಗಳಿಗೆ ಅಗತ್ಯ ಸ್ಥಳಾವಕಾಶ ಮತ್ತು ಸಾರ್ವಜನಿಕರ ಸುರಕ್ಷತೆಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

## ಕಾಗದ ರಹಿತ ಕಛೇರಿ ಮತ್ತು ಪಾರದರ್ಶಕ ಆಡಳಿತ ಜಾರಿ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೫೦ (೪೪೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಯಾವ ಯಾವ ಇಲಾಖೆಗಳನ್ನು ಹಾಗೂ ಕಛೇರಿಗಳನ್ನು ಕಾಗದ ರಹಿತ ಕಛೇರಿಗಳನ್ನಾಗಿ ಮಾಡಲಾಗಿದೆ ; (ವಿವರ ನೀಡುವುದು)

(ಆ) ಯಾವ ಕಛೇರಿ–ಇಲಾಖೆಯನ್ನು ಕಾಗದ ರಹಿತ ಕಛೇರಿಯನ್ನಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆ ; (ವಿವರ ನೀಡುವುದು)

(ಇ) 'ಕಾಗದ ರಹಿತ ಕಛೇರಿ' ಯೋಜನೆಯಿಂದ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಭ್ರಷ್ಟಾಚಾರ ನಿಯಂತ್ರಣ ಸಾಧ್ಯವೆನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ;

(ಈ) ಕಾಗದ ರಹಿತ ಕಛೇರಿ ಮತ್ತು ಪಾರದರ್ಶಕ ಆಡಳಿತ ತರಲು ಸರ್ಕಾರ ಯಾವ ಕಾರ್ಯಕ್ರಮ ಹಮ್ಮಿಕೊಂಡಿದೆ ? (ವಿವರ ನೀಡುವುದು)

## ಅಬಕಾರಿ ಕಾಯ್ದೆಗೆ ತಿದ್ದುಪಡಿ ತಂದು ನೀರಾ ಮತ್ತು ನೀರಾ ಉತ್ಪನ್ನಗಳಿಗೆ ಅವಕಾಶ ನೀಡುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೫೧ (೪೪೪) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಅಬಕಾರಿ ಕಾಯ್ದೆಯಲ್ಲಿನ "ತೆಂಗಿನ ಮರದ ಹುಳಿ ಬರದ ನೀರಾವನ್ನು" (ಕಲ್ಪರಸವನ್ನು) ಕಾಯಿದೆಯಿಂದ ಕೈಬಿಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ನೀರಾ ಮತ್ತು ನೀರಾ ಉತ್ಪನ್ನಗಳನ್ನು ಮುಕ್ತವಾಗಿ ಮಾರಾಟ ಮಾಡಲು ಸಹಾಯವಾಗುವಂತೆ ಕಾಯಿದೆ ತಿದ್ದುಪಡಿಯು ಯಾವ ಹಂತದಲ್ಲಿದೆ ;

(ಇ) ಈ ಬಗ್ಗೆ ನಿಂಯುವಿಾವಳಿ ರೂಪಿಸಲಾಗಿದೆಂಯೇ ; ನಿಯಮಾವಳಿಯಲ್ಲಿನ ಮುಖ್ಯ ಅಂಶಗಳೇನು ;

(ಈ) ನೀರಾ ಹಾಗೂ ನೀರಾ ಉತ್ಪನ್ನಗಳ ಮಾರಾಟಕ್ಕೆ ಅನುಮತಿಸುವ ನಿಯಮಾವಳಿಗಳನ್ನು ಯಾವಾಗ ಅನುಷ್ಠಾನಕ್ಕೆ ತರಲಾಗುವುದು? (ವಿವರ ನೀಡುವುದು)

## ಸರ್ಕಾರದ ವಿವಿಧ ಇಲಾಖೆಗಳು ಜಾಹೀರಾತಿಗೆ ಮಾಡಿದ ವೆಚ್ಚದ ವಿವರ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೫೨ (೪೪೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಸರ್ಕಾರದ ಯಾವ ಯಾವ ಇಲಾಖೆಗೆ ಸಂಬಂಧಿಸಿದಂತೆ ಜಾಹೀರಾತು ನೀಡಲಾಗಿದೆ ;

(ಆ) ಕಳೆದ ೩ ವರ್ಷಗಳಲ್ಲಿ ಜಾಹೀರಾತು ಸಂಬಂಧ ಖರ್ಚು ಮಾಡಿದ ಅನುದಾನ ಎಷ್ಟು ; (ವರ್ಷಾವಾರು–ಇಲಾಖಾವಾರು ಖರ್ಚಿನ ವಿವರ ನೀಡುವುದು)

(ಇ) ಯಾವ ಯಾವ ಮಾಧ್ಯಮಗಳಿಗೆ ಎಷ್ಟೆಷ್ಟು ಮೊತ್ತದ ಜಾಹೀರಾತು ನೀಡಲಾಗಿದೆ ; ಸಂಪೂರ್ಣ ವಿವರ ನೀಡುವುದು ? (೩ ವರ್ಷದ ಮಾಹಿತಿ ನೀಡುವುದು)

## ಬೆಳಗಾವಿ ಜಿಲ್ಲೆಯಲ್ಲಿ ಕಳ್ಳಭಟಿ ತಯಾರಿಕೆ ಹಾಗೂ ಕಳ್ಳ ಮದ್ಯ ಸಾಗಾಣಿಕೆ ಹೆಚ್ಚಾಗಿರುವ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೫೩ (೪೬೧) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯಲ್ಲಿ ಕಳ್ಳಭಟ್ಟಿ ಸಾರಾಯಿ ತಯಾರಿಕೆ ಹೆಚ್ಚಾಗಿರುವುದು ಹಾಗೂ ನೆರೆಯ ರಾಜ್ಯಗಳಿಂದ ರಾಜ್ಯಕ್ಕೆ ಮದ್ಯವು ಕಳ್ಳಸಾಗಾಣಿಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಬೆಳಗಾವಿ ಜಿಲ್ಲೆಯಲ್ಲಿ ಕಳ್ಳಭಟ್ಟಿ ಸಾರಾಯಿ ತಯಾರಿಕಾ ಕೇಂದ್ರಗಳ ಮೇಲೆ ದಾಳಿ ಮಾಡಿ ಎಷ್ಟು ಪ್ರಕರಣಗಳನ್ನು ದಾಖಲಿಸಿ ಅಪರಾಧಿಗಳನ್ನು ಬಂದಿಸಲಾಗಿದೆ ಮತ್ತು ಶಿಕ್ಷೆಗೊಳಪಡಿಸಲಾಗಿದೆ;

(ಇ) ನೆರೆಯ ರಾಜ್ಯಗಳಿಂದ ಮಧ್ಯ ಕಳ್ಳಸಾಗಾಣೆಯ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ಮತ್ತು ಎಷ್ಟು ಅಪರಾಧಿಗಳಿಗೆ ಶಿಕ್ಷೆ ವಿಧಿಸಲಾಗಿದೆ ;

(ಈ) ಕಳ್ಳಭಟ್ಟಿ ಮಾರಾಟ ಕೇಂದ್ರಗಳನ್ನು ಹಾಗೂ ಕಳ್ಳಮಧ್ಯ ಸಾಗಾಣಿಕೆಯನ್ನು ತಡೆಗಟ್ಟಲು ಸರ್ಕಾರವು ಯಾವ ಯಾವ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ ? (ವಿವರ ನೀಡುವುದು)

## ನಗರ ಪ್ರದೇಶದ ಪೌರಕಾರ್ಮಿಕರು ಗೃಹ ಭಾಗ್ಯ ಯೋಜನೆಯ ಲಾಭ ಪಡೆಯದೆ ಇರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೫೪ (೪೬೦) ಮಾನ್ಯ ನಗರಾಭಿವೃದ್ಧಿ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) "ಪೌರಕಾರ್ಮಿಕರಿಗೆ ಗೃಹಭಾಗ್ಯ" ಯೋಜನೆಯಡಿ ನಗರ ಪ್ರದೇಶದ ಪೌರಕಾರ್ಮಿಕರು ಮನೆ ಕಟ್ಟಿಕೊಳ್ಳಲು ಸ್ವಂತ ವಂತಿಕೆ ಭರಿಸುವ ಷರತ್ತಿನಿಂದಾಗಿ ಪೌರಕಾರ್ಮಿಕರು ಯೋಜನೆಯ ಲಾಭ ಪಡೆಯುವುದರಿಂದ ದೂರ ಉಳಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಪೌರಕಾರ್ಮಿಕರು ಈ ಯೋಜನೆಯಡಿ ಮನೆ ನಿರ್ಮಿಸಿಕೊಳ್ಳಲು ಇರುವ ಮಾನದಂಡಗಳೇನು; ಈಗಾಗಲೇ ಎಷ್ಟು ಜನರು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ;

(ಇ) ರಾಜ್ಯದಲ್ಲಿಯ ಎಷ್ಟು ಜನ ಖಾಯಂ ಪೌರಕಾರ್ಮಿಕರಿದ್ದಾರೆ; ಇದರಲ್ಲಿ ಮನೆ ನಿರ್ಮಿಸಿಕೊಳ್ಳಲು ಎಷ್ಟು ಜನರು ಅರ್ಜಿ ಸಲ್ಲಿಸಿರುತ್ತಾರೆ ;

(ಈ) ಮನೆ ನಿರ್ಮಿಸಿಕೊಳ್ಳಲು ಇರುವ ಘಟಕ ವೆಚ್ಚವೆಷ್ಟು ; ಅದರಲ್ಲಿ ಪೌರಕಾರ್ಮಿಕರ ವಂತಿಕೆ ಹಣವೆಷ್ಟು ; ವಂತಿಕೆ ಹಣವನ್ನು ಭರಿಸಲಾಗದೆ ಪೌರಕಾರ್ಮಿಕರು ಈ ಯೋಜನೆಯ ಲಾಭ ಪಡೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರವು ಯಾವ ಸೂಕ್ತ ಕ್ರಮ ಕೈಗೊಳ್ಳುವುದು?

## ರಾಜ್ಯದಲ್ಲಿ ಮಕ್ಕಳ ನಾಪತ್ತೆ ಪ್ರಕರಣಗಳ ಹಾಗೂ ಅಪಹರಣಗಳು ಹೆಚ್ಚಾಗುತ್ತಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೫೫ (೪೬೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಮಕ್ಕಳ ನಾಪತ್ತೆ ಮತ್ತು ಅಪಹರಣದಂತಹ ಪ್ರಕರಣಗಳು ಹೆಚ್ಚುತ್ತಿರುವುದು ಅದರಲ್ಲೂ ಬೆಂಗಳೂರಿನಲ್ಲಿ ಅತಿಹೆಚ್ಚು ನಾಪತ್ತೆ ಪ್ರಕರಣಗಳು ವರದಿಯಾಗುತ್ತಿದ್ದು, ಸಾರ್ವಜನಿಕರು ಆತಂಕಕ್ಕೊಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ೨೦೧೪–೧೫, ೨೦೧೫–೧೬ ಅಕ್ಟೋಬರ್ ೨೦೧೬ರ ತಿಂಗಳವರೆಗೆ ಒಟ್ಟು ಎಷ್ಟು ಪ್ರಕರಣಗಳು ದಾಖಲಾಗಿವೆ;

(ಇ) ಎಷ್ಟು ಪ್ರಕರಣಗಳಲ್ಲಿ ಅಪರಾಧಿಗಳನ್ನು ಪತ್ತೆ ಹಚ್ಚಲಾಗಿದೆ; ಎಷ್ಟು ಜನ ಅಪರಾಧಿಗಳಿಗೆ ಶಿಕ್ಷೆ ವಿಧಿಸಲಾಗಿದೆ ;

(ಈ) ಇಂತಹ ಪ್ರಕರಣಗಳನ್ನು ತಡೆಗಟ್ಟಲು, ಮಹಿಳೆ ಮತ್ತು ಮಕ್ಕಳನ್ನು ರಕ್ಷಿಸಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ ?

## ಜಿಲ್ಲೆಗೊಂದರಂತೆ ಸ್ಪರ್ಧಾತ್ಮಕ ತರಬೇತಿ ಕೇಂದ್ರ ತೆರೆಯುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೩೫೬ (೪೬೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ವಿದ್ಯಾರ್ಥಿಗಳು ಐ.ಎ.ಎಸ್., ಕೆ.ಎ.ಎಸ್., ಮತ್ತು ಐ.ಪಿ.ಎಸ್., ನಂತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೆಚ್ಚಿನ ತರಬೇತಿ ಪಡೆಯಲು ಬೇರೆ ಬೇರೆ ರಾಜ್ಯಗಳಿಗೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ರಾಜ್ಯದಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ ಸುಸಜ್ಜಿತ ಸ್ಪರ್ಧಾತ್ಮಕ ತರಬೇತಿ ಕೇಂದ್ರ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಮುಂದಿನ ಆಯವ್ಯಯದಲ್ಲಿ ಅನುಷ್ಠಾನಗೊಳಿಸಲಾಗುವುದೇ;

(ಇ) ಈ ಸಂಬಂಧ ತೆಗೆದುಕೊಳ್ಳಲಾಗುವ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

## ಮಂಗಳಮುಖಿಯರಿಂದ ಸಾರ್ವಜನಿಕರಿಗೆ ತೊಂದರೆ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೩೫೭ (೪೬೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಮಂಗಳಮುಖಿಯರು ಭಿಕ್ಷೆ ಬೇಡುತ್ತಿರುವುದು ಹಾಗೂ ಅಸಭ್ಯವರ್ತನೆಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಇದನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಮಂಗಳಮುಖಿಯರು ಗೌರವವಾಗಿ ಸಮಾಜದಲ್ಲಿ ಬದುಕಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಇವರುಗಳಿಗಾಗಿ ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು? (ಮಾಹಿತಿ ನೀಡುವುದು)

## ಮುಖ್ಯಮಂತ್ರಿಗಳ ನಿಧಿಯಿಂದ ಪರಿಹಾರ ನೀಡುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೩೫೮ (೪೬೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಧನ ಸಹಾಯ ಕೇಳುವ ಫಲಾನುಭವಿಗಳಿಗೆ ಹಣ ನೀಡಲು ತುಂಬಾ ವಿಳಂಬವಾಗುತ್ತಿದೆ ಎಂಬ ದೂರು ಸರ್ಕಾರದ ಗಮನಕ್ಕೆ ಬಂದಿದೆಯೇ; ವಿಳಂಬದಿಂದಾಗಿ ಆಕಾಂಕ್ಷಿಗಳಿಗೆ ತೊಂದರೆಯಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ;

(ಆ) ಅರ್ಜಿ ಸಲ್ಲಿಸಿದ ದಿನದಿಂದ ಗರಿಷ್ಠ ಎಷ್ಟು ದಿನಗಳವರೆಗೆ ಅರ್ಜಿದಾರರು ಕಾಯಬೇಕಾಗುವುದು ;

(ಇ) ಆದಷ್ಟು ಬೇಗ ಸಹಾಯ ಧನ ನೀಡಲಾಗುವುದೇ ;

(ಈ) ಯಾವ ಯಾವ ಖಾಯಿಲೆಗಳಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಸಹಾಯ ಧನ ನೀಡಲಾಗುವುದು ?

# ಇಳಕಲ್ ನಗರದಲ್ಲಿ ಧರಣಿ ಮಾಡಿದವರ ಮೇಲೆ ಕೇಸ್ ಹಾಕಿರುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೩೫೯ (೪೭೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಾಗಲಕೋಟೆ ಜಿಲ್ಲೆ, ಇಳಕಲ್ ನಗರಸಭೆ ಮಾರ್ಗಸೂಚಿಗೆ ವಿರುದ್ಧವಾಗಿ ಸ್ವಯಂ ಘೋಷಿತ ಆಸ್ತಿ ತೆರಿಗೆ ಸಂಗ್ರಹ ಮಾಡುತ್ತಿರುವುದು ನಿಲ್ಲಬೇಕು ಮತ್ತು ಸ್ವಯಂ ಘೋಷಿತ ಆಸ್ತಿ ತೆರಿಗೆ ಸಂಗ್ರಹ ಹಣ ದುರುಪಯೋಗವಾಗಿರುವ ಬಗ್ಗೆ ತನಿಖೆ ನಡೆಯಬೇಕು ಎಂದು ಆಗ್ರಹಿಸಿ, ಜನಾಂದೋಲನ ನಡೆಸಿರುವ ಹೋರಾಟಗಾರರ ಮೇಲೆ ಪೌರಾಯುಕ್ತರು ಹಾಗೂ ನಗರಸಭೆ ಸಿಬ್ಬಂದಿ ವಿನಾಕಾರಣ ಕರ್ತವ್ಯ ಬೆದರಿಕೆ ಮತ್ತು ಜಾತಿ ನಿಂದನೆಯಂಥ ಗುರುತರ ಪ್ರಕರಣ ದಾಖಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸರ್ಕಾರದ ನಿಯಮಾವಳಿಗಳ ಪ್ರಕಾರ ತೆರಿಗೆ ವಸೂಲಿ ಮಾಡಿ ಎಂದು ಅಗ್ರಹಿಸಿದವರ ಮೇಲೆ ಅಧಿಕಾರಿಗಳೇ ಇಂತಹ ಸುಳ್ಳು ದೂರುಗಳನ್ನು ನೀಡುವುದರಿಂದ, ಸರ್ಕಾರದ ವರ್ಚಸ್ಸಿಗೆ ಧಕ್ಕೆ ಬರುವುದಿಲ್ಲವೇ ; ಸುಳ್ಳು ದೂರು ವಾಪಸ್ ಪಡೆಯುವಂತೆ ಹಾಗೂ ಸುಳ್ಳು ದೂರು ನೀಡಿದ ಪೌರಾಯುಕ್ತರು ಮತ್ತು ಸಿಬ್ಬಂದಿ ಮೇಲೆ ಸರ್ಕಾರ ಯಾವುದಾದರೂ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದೆ ? (ಸ್ಪಷ್ಟ ವಿವರಗಳನ್ನು ನೀಡುವುದು)

## ಬೆಂಗಳೂರು ನಗರದಲ್ಲಿ ಖಾಸಗಿಯಾಗಿ ನಿರ್ಮಾಣವಾಗುತ್ತಿರುವ ಅಪಾರ್ಟ್‌ಮೆಂಟ್‌ಗಳ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೬೦ (೧೩೧) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದಲ್ಲಿ ಖಾಸಗಿಯಾಗಿ ನಿರ್ಮಾಣವಾಗುತ್ತಿರುವ ಅಪಾರ್ಟ್‌ಮೆಂಟ್‌ಗಳ ಸಂಖ್ಯೆ ಎಷ್ಟು ; ಇದರಲ್ಲಿ ಎಷ್ಟು ಅಪಾರ್ಟ್‌ಮೆಂಟ್‌ಗಳ ನಿರ್ಮಾಣಕ್ಕೆ ಸರ್ಕಾರ ಅನುಮತಿ ನೀಡಿದೆ ;

(ಆ) ಈ ಅಪಾರ್ಟ್‌ಮೆಂಟ್‌ಗಳಿಗೆ ಕಾವೇರಿ ನೀರಿನ ಸಂಪರ್ಕ ಕೊಡಲಾಗಿದೆಯೇ ; ಕೊಟ್ಟಿದ್ದಲ್ಲಿ ಎಷ್ಟು ಅಪಾರ್ಟ್‌ಮೆಂಟ್‌ಗಳಿಗೆ ಕಾವೇರಿ ನೀರಿನ ಸಂಪರ್ಕ ನೀಡಲಾಗಿದೆ ; (ವಿವರ ನೀಡುವುದು)

(ಇ) ನಾಯಿಕೊಡೆಯಂತೆ ನಿರ್ಮಾಣವಾಗುತ್ತಿರುವ ಈ ಅಪಾರ್ಟ್‌ಮೆಂಟ್‌ಗಳ ನಿರ್ಮಾಣವನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಗೃಹ ಇಲಾಖೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಪೊಲೀಸ್ ನೌಕರರ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೬೧ (೧೩೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗೃಹ ಇಲಾಖೆಯಲ್ಲಿ ಒಟ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಡಿ.ವೈ.ಎಸ್.ಪಿ (ಸಿವಿಲ್)ಗಳ ಸಂಖ್ಯೆ ಎಷ್ಟು ; (ವಿವರದೊಂದಿಗೆ ಮಾಹಿತಿ ನೀಡುವುದು)

(ಆ) ಈ ಅಧಿಕಾರಿಗಳಲ್ಲಿ ಕಳೆದ ಮೂರು ವರ್ಷಗಳಿಂದ ಕಾರ್ಯಕಾರಿ (Executive) ಮತ್ತು ಕಾರ್ಯಕಾರೇತರ (Non Executive) ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆ ಎಷ್ಟು ; (ವಿವರದೊಂದಿಗೆ ಮಾಹಿತಿ ನೀಡುವುದು)

(ಇ) ಗೃಹ ಇಲಾಖೆಯಲ್ಲಿರುವ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು ; ಇದರಲ್ಲಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಮತ್ತು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ ?

## ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳ ಬಗ್ಗೆ

**ಶ್ರೀ ನಿರಾಣಿ ಹನಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) :–**

೩೬೨ (೧೩೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ;

(ಆ) ಈ ಹುದ್ದೆಗಳು ಯಾವ ವರ್ಷದಿಂದ ಖಾಲಿ ಇವೆ ; (ವಿವರ ನೀಡುವುದು)

(ಇ) ರಾಜ್ಯದಲ್ಲಿ ಸುಮಾರು ಜನ ನಿರುದ್ಯೋಗಿ ಪದವೀಧರರು ಮತ್ತು ಸಂಬಂಧಿಸಿದ ತರಬೇತಿ ಪಡೆದವರು ಇದ್ದರೂ, ನೇಮಕಾತಿ ಮಾಡಿಕೊಳ್ಳದೇ ಇರಲು ಕಾರಣವೇನು ;

(ಈ) ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಯಾವಾಗ ?

## ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ ಬೇಡಿಕೆಗಳು

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೬೩ (೪೫೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪೊಲೀಸ್ ಅಧಿಕಾರಿ/ಸಿಬ್ಬಂದಿಯ ಬೇಡಿಕೆಗಳು ಯಾವುವು ; ಅವುಗಳಲ್ಲಿ ಯಾವುದನ್ನು ಈಡೇರಿಸಲಾಗಿದೆ ; ವೇತನ ಹೆಚ್ಚಳದ ಬಗ್ಗೆ ಔರಾದ್‌ಕರ್ ವರದಿಯ ಶಿಫಾರಸ್ಸುಗಳೇನು ; ಅವುಗಳನ್ನು ಜಾರಿಗೆ ತರಲು ಕ್ರಮ ತೆಗೆದುಕೊಳ್ಳಲಾಗುವುದೇ ;

(ಆ) ಎಷ್ಟು ಜನ ಪೊಲೀಸ್ ಸಿಬ್ಬಂದಿ, ಅಧಿಕಾರಿಗಳ ಮನೆಯಲ್ಲಿ ಆರ್ಡಲಿಗಳಾಗಿ ಕೆಲಸ ಮಾಡುತ್ತಿದ್ದಾರೆ ; ಆರ್ಡಲಿ ಪದ್ಧತಿಯನ್ನು ರದ್ದುಪಡಿಸಿ, ಆದೇಶ ಹೊರಡಿಸಲಾಗಿದೆಯೇ ;

(ಇ) ಪೊಲೀಸ್ ಸಿಬ್ಬಂದಿಗೆ ವಾರದ ಬಿಡುವು (ವೀಕ್ಲಿ ಆಫ್) ಮತ್ತು ರಜೆ, ಉಚಿತ ರೇಷನ್ (ದವಸ ಧಾನ್ಯ) ನೀಡುವ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ; ಉಚಿತ ರೇಷನ್ ಬದಲು ತಿಂಗಳಿಗೆ ರೂ.೪೦೦/–ಗಳನ್ನು ಎಕ್ಸ್‌ಗ್ರೇಷಿಯಾ ರೂಪದಲ್ಲಿ ನೀಡುವ ಯೋಜನೆಯನ್ನು ಜಾರಿಗೆ ತರಲಾಗಿದೆಯೇ ?

## ಮೈಸೂರು ನಗರದ ದೇವರಾಜ ಮಾರುಕಟ್ಟೆಯ ಪುನರ್ ನಿರ್ಮಾಣ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೬೪ (೪೧೧) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ನಗರದ ದೇವರಾಜ ಮಾರುಕಟ್ಟೆಯ ನವೀಕರಣ ಅಥವಾ ದುರಸ್ಥಿ ಸಾಧ್ಯವಿಲ್ಲವೆಂದೂ ಇದನ್ನು ಪೂರ್ತಿಯಾಗಿ

ನೆಲಸಮ ಮಾಡಿ ಅದೇ ವಿನ್ಯಾಸದಲ್ಲಿ ಮರು ನಿರ್ಮಾಣ ಮಾಡಬೇಕೆಂದು ತಜ್ಞರ ತಂಡವು ಶಿಫಾರಸ್ಸು ಮಾಡಿದೆಯೇ ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಹಾಗಿದ್ದಲ್ಲಿ, ಈಗ ನಡೆಯುತ್ತಿದ್ದ ನವೀಕರಣ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿದೆಯೇ ; ನವೀಕರಣಕ್ಕಾಗಿ ಇದುವರೆಗೆ ಬಿಡುಗಡೆ ಮಾಡಿರುವ ಹಣ ಮತ್ತು ವೆಚ್ಚ ಮಾಡಿರುವ ಹಣ ಎಷ್ಟು ;

(ಇ) ಲ್ಯಾನ್ಸ್‌ಡೌನ್ ಕಟ್ಟಡದ ನವೀಕರಣ ಕಾಮಗಾರಿ ಯಾವ ಹಂತದಲ್ಲಿದೆ ; ನವೀಕರಣ ಯೋಜನೆಯು ಮುಂದುವರಿಯಲಿದೆಯೇ ; ಯಾವಾಗ ಇದು ಪೂರ್ಣಗೊಳ್ಳುತ್ತದೆ ಲ್ಯಾನ್ಸ್‌ಡೌನ್ ಕಟ್ಟಡದ ಮುಂದಿರುವ ತಾತಯ್ಯ ಪಾರ್ಕ್‌ನ್ನು ಆಧುನೀಕರಣಗೊಳಿಸಲು ಸರ್ಕಾರವು ಕ್ರಮ ಜರುಗಿಸಲಾಗಿದೆಯೇ ?

## ಮೈಸೂರು ನಗರದಲ್ಲಿರುವ ಪಾರಂಪರಿಕ ಕಟ್ಟಡಗಳ ಜೀರ್ಣೋದ್ಧಾರ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೬೫ (೪೧೨) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ನಗರದಲ್ಲಿ ಗುರುತಿಸಿರುವ ಪಾರಂಪರಿಕ ಕಟ್ಟಡಗಳು ಯಾವುವು ; ಈ ಕಟ್ಟಡಗಳು ಪೈಕಿ ಯಾವ ಯಾವ ಕಟ್ಟಡಗಳ ಅಭಿವೃದ್ಧಿ/ ಜೀರ್ಣೋದ್ಧಾರವನ್ನು ಕೈಗೊಳ್ಳಲಾಗಿದೆ ; ಇದುವರೆಗೆ ಆಗಿರುವ ಕಾಮಗಾರಿಗಳು ಯಾವುವು ; ಈ ಕಾಮಗಾರಿಗಳಿಗೆ ಮಂಜೂರಾಗಿರುವ, ಬಿಡುಗಡೆಯಾಗಿರುವ ಮತ್ತು ವೆಚ್ಚವಾಗಿರುವ ಅನುದಾನ ಎಷ್ಟು ; ಕಾಮಗಾರಿಗಳು ಯಾವ ಹಂತದಲ್ಲಿವೆ ; (ಪ್ರತಿಯೊಂದು ಕಟ್ಟಡದ ವಿವರ ಒದಗಿಸುವುದು)

(ಆ) ಗನ್‌ಹೌಸ್, ಚಾಮರಾಜೇಂದ್ರ ಆರ್ಟ್ ಗ್ಯಾಲರಿ (ಕಾವಾ) ಸಂಸ್ಕೃತ ಪಾಠಶಾಲೆ, ಆಯುರ್ವೇದ ಆಸ್ಪತ್ರೆ ಅತ್ಯಂತ ಸುಂದರವಾದ ಪಾರಂಪರಿಕ ಕಟ್ಟಡಗಳಾಗಿದ್ದು, ಈ ಕಟ್ಟಡಗಳು ಜೀರ್ಣಸ್ಥಿತಿಯಲ್ಲಿರುವುದು, ಕಟ್ಟಡಗಳ ಮೇರೆ ಗಿಡಗಂಟೆಗಳು ಬೆಳೆದು ಬಿರುಕು ಬಿಟ್ಟಿರುವುದು, ಸೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ಕಟ್ಟಡಗಳನ್ನು ಪಾರಂಪರಿಕ ಕಟ್ಟಡಗಳೆಂದು ಪರಿಗಣಿಸಿ ಕೂಡಲೇ ಇವುಗಳ ಜೀರ್ಣೋದ್ಧಾರ ದುರಸ್ಥಿ ಕಾರ್ಯ ಕೈಗೊಳ್ಳಲಾಗುವುದೇ ;

(ಇ) ಹಳೇ ಅಗ್ರಹಾರದಲ್ಲಿರುವ ವಾಣಿವಿಲಾಸ ಮಾರುಕಟ್ಟೆ ಅಥವಾ ಚಿಕ್ಕ ಮಾರುಕಟ್ಟೆಯನ್ನು ಪಾರಂಪರಿಕ ಕಟ್ಟಡವೆಂದು ಪರಿಗಣಿಸಿ ಇದರ ಅಭಿವೃದ್ಧಿಗೆ ಕ್ರಮ ತೆಗೆದುಕೊಳ್ಳಲಾಗುವುದೇ ; ಅರಮನೆ ಆಸುಪಾಸಿನಲ್ಲಿರುವ ಹಳೆಯ ಕಟ್ಟಡಗಳನ್ನು ಗುರುತಿಸಿ ಅವುಗಳನ್ನು ಪಾರಂಪರಿಕ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದೇ ?

## ರಂಗಾಚಾರ್ಲ್ಲು ಪುರಭವನ ಪಕ್ಕದ ಕಾಮಗಾರಿಯಿಂದ ನಗರ ಸೌಂದರ್ಯ ಹಾನಿ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೬೬ (೪೧೦) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಂಗಾಚಾರ್ಲ್ಲು ಪುರಭವನದ ಆವರಣದಲ್ಲಿ ಅರಮನೆಗೆ ಅಭಿಮುಖವಾಗಿರುವ ಭಾಗವನ್ನು ಲೋಕೋಪಯೋಗಿ ಇಲಾಖೆಯವರು ಡಂಪಿಂಗ್ ಯಾರ್ಡ್ ಮಾಡಿಕೊಂಡಿದ್ದು, ಇದು ನಗರ ಸೌಂದರ್ಯಕ್ಕೆ ಧಕ್ಕೆಯನ್ನು ತಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ಜಾಗದಲ್ಲಿ ಯಾವ ಕಾಮಗಾರಿ ನಡೆಯುತ್ತಿದೆ ; ಇದು ಯಾವಾಗ ಮುಕ್ತಾಯವಾಗುತ್ತದೆ ; ಈ ಜಾಗವು ನಗರದ ಹೃದಯ ಭಾಗದಲ್ಲಿದ್ದು, ಇದನ್ನು ಸ್ವಚ್ಛಗೊಳಿಸಿ, ಉದ್ಯಾನವನ್ನು ಬೆಳೆಸಿ ಆಕರ್ಷಕವಾಗುವಂತೆ ಮಾಡಲು ಕ್ರಮ ಜರುಗಿಸಲಾಗುವುದೇ ?

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒತ್ತುವರಿ ತೆರವು ಕಾರ್ಯಾಚರಣೆಯಲ್ಲಾಗಿರುವ ಪಕ್ಷಪಾತದ ಬಗ್ಗೆ

**ಶ್ರೀ ಕೆ.ವಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)** :–

೩೬೭ (೪೨೧) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸರ್ಕಾರಿ ಜಮೀನು ಮತ್ತು ರಾಜಕಾಲುವೆ ಒತ್ತುವರಿ ತೆರವು ಕಾರ್ಯದಲ್ಲಿ ಪಕ್ಷಪಾತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಒತ್ತುವರಿ ಮಾಡಿದ ಪ್ರಕರಣಗಳ ಸಂಖ್ಯೆ ಎಷ್ಟು ;

(ಇ) ಒತ್ತುವರಿ ಮಾಡಿದ ಎಲ್ಲರಿಗೂ ನೋಟೀಸ್ ನೀಡಲಾಗಿದೆಯೇ ;

(ಈ) ಎಷ್ಟು ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ ;

(ಉ) ಎಷ್ಟು ಒತ್ತುವರಿಗಳನ್ನು ತೆರವುಗೊಳಿಸಲಾಗಿಲ್ಲ ; ಅದಕ್ಕೆ ಕಾರಣಗಳೇನು ?

## ಸಾರ್ವಜನಿಕ ಉದ್ಯಾನವನಗಳು ಕಾನೂನು ಬಾಹಿರ ಚಟುವಟಿಕೆಗಳ ತಾಣವಾಗಿರುವ ಬಗ್ಗೆ

**ಶ್ರೀ ಕೆ.ವಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)** :–

೩೬೮ (೪೨೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರ ವ್ಯಾಪ್ತಿಯ ಸಾರ್ವಜನಿಕ ಉದ್ಯಾನವನಗಳು ಕಾನೂನು ಬಾಹಿರ ಚಟುವಟಿಕೆಗಳ ತಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ರೀತಿಯ ಕಾನೂನು ಬಾಹಿರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ೨೦೧೩ ರಿಂದ ವರ್ಷವಾರು ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು ;

(ಇ) ಸದರಿ ಕಾನೂನು ಬಾಹಿರ ಚಟುವಟಿಕೆಗಳ ಕಡಿವಾಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿಗೆ ಬಿಡುಗಡೆಯಾಗಿರುವ ಅನುದಾನದ ಕುರಿತು

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೬೯ (೪೯೪) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೩ ವರ್ಷಗಳಲ್ಲಿ ಬೆಂಗಳೂರು ಜಿಲ್ಲೆಗಳ ವಿಧಾನ ಸಭಾ ಕ್ಷೇತ್ರಗಳ ಅಭಿವೃದ್ಧಿಗಾಗಿ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು ; (ಕ್ಷೇತ್ರವಾರು ಮಾಹಿತಿ ನೀಡುವುದು)

(ಆ) ವಿಧಾನಸಭಾ ಕ್ಷೇತ್ರಗಳಲ್ಲಿ ಯಾವ ಯಾವ ಯೋಜನೆಯಡಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ; ಮತ್ತು ಯಾವ ಕಾಮಗಾರಿಗಳಿಗೆ ಎಷ್ಟು ಅನುದಾನವನ್ನು ನೀಡಲಾಗಿದೆ ; (ಪ್ರತಿ ವಾರ್ಡ್‌ವಾರು ವಿವರ ನೀಡುವುದು)

(ಇ) ಕೈಗೆತ್ತಿಕೊಂಡ ಕಾಮಗಾರಿಗಳನ್ನು ಯಾವ ಯಾವ ಸಂಸ್ಥೆಗಳಿಗೆ ಅಥವಾ ವ್ಯಕ್ತಿಗಳಿಗೆ ಗುತ್ತಿಗೆ ನೀಡಲಾಗಿದೆ ; ಸದರಿ ಕಾಮಗಾರಿಗಳು ಯಾವ ಹಂತದಲ್ಲಿವೆ ;

(ಈ) ಗುತ್ತಿಗೆದಾರರು ಕಾಮಗಾರಿಗಳನ್ನು ನಿಗಧಿತ ಕಾಲಮಿತಿಯೊಳಗೆ ಪೂರ್ಣಗೊಳಿಸಿದ್ದಾರೆಯೇ ; ಕಾಮಗಾರಿಗಳ ಗುಣಮಟ್ಟವನ್ನು ಪರೀಕ್ಷಿಸಲಾಗಿದೆಯೇ ; ಇವುಗಳಿಗೆ ಸಂಬಂಧಿಸಿದಂತೆ ಯಾವುದಾದರೂ ದೂರುಗಳು ಬಂದಿವೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು ?

## ರಾಜ್ಯದಲ್ಲಿ ಮಕ್ಕಳ ನಾಪತ್ತೆ ಪ್ರಕರಣ ಕುರಿತು

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೭೦ (೧೩೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಮಕ್ಕಳ ನಾಪತ್ತೆ ಪ್ರಕರಣಗಳು ಹೆಚ್ಚುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಒಟ್ಟು ಎಷ್ಟು ಪ್ರಕರಣಗಳು ದಾಖಲಾಗಿವೆ ; ಆ ಪೈಕಿ ಪತ್ತೆಯಾದ ಪ್ರಕರಣಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಹಸಿವು ಮುಕ್ತ ರಾಜ್ಯವನ್ನಾಗಿಸಲು ರಾಜ್ಯ ಸರ್ಕಾರ ಎಷ್ಟೇ ಪ್ರಯತ್ನ ಮಾಡಿದರೂ, ಮೂರು ಹೊತ್ತಿನ ಊಟಕ್ಕೆ ಮನೆಯಲ್ಲಿ ಸಮಸ್ಯೆ ಇರುವ ಕುಟುಂಬಗಳ ಮಕ್ಕಳೇ ನಾಪತ್ತೆ ಆಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಇಂತಹ ಎಷ್ಟು ಪ್ರಕರಣಗಳು ದಾಖಲಾಗಿವೆ ? (ಸಂಪೂರ್ಣ ಮಾಹಿತಿ ನೀಡುವುದು)

## ನೀರಿನ ದರಗಳ ಪರಿಷ್ಕರಣೆ ಕುರಿತು

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೭೧ (೪೪೫) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸರ್ಕಾರದ ನಿರ್ದೇಶನಗಳಂತೆ ನೀರಿನ ದರಗಳನ್ನು ಪರಿಷ್ಕರಿಸಲಾಗಿದೆಯೇ ; ಇಲ್ಲದಿದ್ದಲ್ಲಿ, ಕಾರಣಗಳೇನು ;

(ಆ) ಸರ್ಕಾರದ ಪರಿಷ್ಕರಣಾ ದರದಂತೆ ನೀರಿನ ದರಗಳನ್ನು ವಸೂಲಾತಿ ಮಾಡಲಾಗುತ್ತಿದೆಯೇ ; ಮಾಡಿದ್ದಲ್ಲಿ, ಕಳೆದ ೩ ವರ್ಷಗಳಲ್ಲಿ ವಸೂಲಿಯಾದ ಮೊತ್ತವೆಷ್ಟು ; (ಗ್ರಾಮ ಪಂಚಾಯತಿಗಳವಾರು ಸಂಪೂರ್ಣ ವಿವರ ನೀಡುವುದು)

(ಇ) ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಗೆ ಸ್ಥಳೀಯ ಸಂಸ್ಥೆಗಳು ಪಾವತಿಸಿದ ಮೊತ್ತವೆಷ್ಟು ; ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ಕಾರ್ಯ ಕುಂಠಿತವಾಗಿದ್ದು, ಈ ಸಂಬಂಧ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಈ) ಪ್ರಸ್ತುತ ನೀರು ಸರಬರಾಜು ಕುರಿತು ನೀರಿನ ದರಗಳನ್ನು ಸರ್ಕಾರದ ಆದೇಶದ ರೀತ್ಯಾ ಪರಿಷ್ಕರಿಸಲಾಗಿದೆಯೇ ಹಾಗೂ ವಸೂಲಿ ಮಾಡಲಾಗುತ್ತಿದೆಯೇ ? (ಸಂಪೂರ್ಣ ವಿವರ ನೀಡುವುದು)

## ನಮ್ಮ ಮೆಟ್ರೋ ಯೋಜನೆಯ ಪ್ರಗತಿಯ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೭೨ (೪೫೫) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದಿಂದ ಎಷ್ಟು ಹಂತದ ಕಾಮಗಾರಿಗಳು ಪೂರ್ಣಗೊಂಡಿದೆ ಹಾಗೂ ಅವುಗಳಲ್ಲಿ ರೈಲು ಪ್ರಯಾಣಕ್ಕೆ ಮುಕ್ತವಾಗಿರುವ ಹಂತಗಳು ಯಾವುವು ;

(ಆ) ಈ ಯೋಜನೆಯನ್ವಯ ಪೂರ್ಣಗೊಳಿಸಲು ಬಾಕಿಯಿರುವ ಹಂತವಾರು ಕಾಮಗಾರಿಗಳು ಯಾವುವು ; ಇದನ್ನು ಪೂರ್ಣಗೊಳಿಸಲು ನಿರ್ಧರಿತ ಕಾಲಮಿತಿ ಎಷ್ಟು ;

(ಇ) ಈ ಯೋಜನೆಯನ್ವಯ ಒಟ್ಟು ಮಾಡಲಾದ ವೆಚ್ಚವೆಷ್ಟು ; (ವರ್ಷವಾರು ವಿವರ ನೀಡುವುದು)

(ಈ) ಮೆಟ್ರೋ ಯೋಜನೆಯನ್ನು ಮುಂದಿನ ವರ್ಷಗಳಲ್ಲಿ ಯಾವ ಯಾವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕೇಂದ್ರಗಳಿಗೆ ಜೋಡಿಸುವ ಚಿಂತನೆ ಸರ್ಕಾರದ ಮುಂದಿದೆ ?

## ಲೋಕಾಯುಕ್ತ ಇಲಾಖೆಯ ತನಿಖಾ ವರದಿಯ ಕ್ರಮದ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೭೩ (೪೫೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಿಂದ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ ದೂರು ಪ್ರಕರಣಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ಇಲಾಖಾವಾರು ವಿವರ ನೀಡುವುದು)

(ಆ) ಇವುಗಳಲ್ಲಿ ಲೋಕಾಯುಕ್ತರಿಗೆ ಮತ್ತು ಉಪಲೋಕಾಯುಕ್ತರಿಗೆ ವಹಿಸಲಾದ ಇಲಾಖಾವಾರು ಪ್ರಕರಣಗಳೆಷ್ಟು ; (ಜಿಲ್ಲಾವಾರು, ಇಲಾಖಾವಾರು ವಿವರ ನೀಡುವುದು)

(ಇ) ಕಳೆದ ೩ ವರ್ಷಗಳಿಂದ ಲೋಕಾಯುಕ್ತ ಸಂಸ್ಥೆಯಿಂದ ಸರ್ಕಾರಕ್ಕೆ ಬಂದ ತನಿಖಾ ವರದಿಗಳೆಷ್ಟು ; (ಜಿಲ್ಲಾವಾರು, ಇಲಾಖಾವಾರು ವಿವರ ನೀಡುವುದು) ಈ ವರದಿಯನ್ವಯ ಸಂಬಂಧಿತರ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು ?

## ಬೆಂಗಳೂರು ಮಹಾನಗರ ಪಾಲಿಕೆಯ ವಸತಿ ಸಮುಚ್ಛಯಗಳ ಕಟ್ಟಡಗಳ ಕುಸಿತ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೭೪ (೪೫೪) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬಹುಮಹಡಿ ಕಟ್ಟಡಗಳ ಕುಸಿತದಿಂದ ಜೀವಹಾನಿಯಾದ, ಗಾಯಗೊಂಡ, ಅಂಗವೈಕಲ್ಯ ಹೊಂದಿದವರ ಸಂಖ್ಯೆ ಎಷ್ಟು ;(ವಸತಿ ಸಮುಚ್ಛಯವಾರು, ನಿರ್ಮಿಸಿದ ಸಂಸ್ಥೆಗಳ ವಿವರ ನೀಡುವುದು)

(ಆ) ಹೊಸ ಕಟ್ಟಡ ನಿರ್ಮಾಣದಲ್ಲಿ ಇಂತಹ ಅವಘಡಗಳು ಸಂಭವಿಸಲು ಅವುಗಳ ವಿನ್ಯಾಸ ಕಳಪೆ ಕಾಮಗಾರಿ ಹಾಗೂ ಧಾರಣಾ ಸಾಮರ್ಥ್ಯದಲ್ಲಿನ ದೋಷ ಕಾರಣವೆನ್ನುವ ಮಾಹಿತಿಯನ್ನು ಸರ್ಕಾರವು ಗಮನಿಸಿದೆಯೇ ; ಇಂತಹ ಪ್ರಕರಣಗಳನ್ನು ತಡೆಯುವಲ್ಲಿ ಇಲಾಖೆಗೆ ಇರುವ ನಿಯಂತ್ರಣವೇನು ;

(ಇ) ಇಂತಹ ಘಟನೆಗಳಿಂದ ಮುಗ್ಧ ಅಮಾಯಕರ ಜೀವ ಬಲಿಯಾಗುವುದರಿಂದ ಇದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ ; ಮಾಡಲಾಗಿದ್ದಲ್ಲಿ, ವರದಿ ನೀಡುವುದು ಸಂತ್ರಸ್ತರಿಗೆ ನೀಡಲಾದ ಪರಿಹಾರ ಕ್ರಮವೇನು ? (ಘಟನೆವಾರು ವಿವರ ನೀಡುವುದು)

## ವಾಣಿಜ್ಯ ತೆರಿಗೆ ಇಲಾಖೆಯ ಸಿಬ್ಬಂದಿಯ ಕೊರತೆಯ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೭೫ (೪೫೩) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಮಂಜೂರಾತಿಯಾದ ಹಾಗೂ ಖಾಲಿಯಿರುವ ಅಧಿಕಾರಿಗಳ ಮತ್ತು ಸಿಬ್ಬಂದಿಗಳ (ಹುದ್ದೆ) ಸಂಖ್ಯೆ ಎಷ್ಟು ; (ಶ್ರೇಣಿವಾರು, ಕಛೇರಿವಾರು, ಜಿಲ್ಲಾವಾರು ವಿವರ ನೀಡುವುದು)

(ಆ) ಕೋಟ್ಯಾಂತರ ರೂಪಾಯಿ ಮೌಲ್ಯದ ಸರ್ಕಾರಿ ಸ್ವತ್ತುಗಳ ತೆರಿಗೆ ಸೋರುತ್ತಿರುವುದನ್ನು ನಿಯಂತ್ರಿಸಲು ಸರ್ಕಾರವು ಕೈಗೊಂಡ ಕ್ರಮವೇನು ; ಹಾಗೂ ಈ ಸೋರುವಿಕೆಗೆ ಕಳೆದ ೩ ವರ್ಷಗಳಿಂದ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ ?

## ರಾಜ್ಯದಲ್ಲಿ ಗುಪ್ತದಳ ಇಲಾಖೆಯ ಪುನಶ್ಚೇತನ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೭೬ (೪೫೭) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ದೃಶ್ಯ ಮಾಧ್ಯಮ ಹಾಗೂ ಮಾಧ್ಯಮಗಳ ವರದಿಯನ್ನು ಆಧರಿಸಿ ಗುಪ್ತಚರ ಇಲಾಖೆ ಸರ್ಕಾರಕ್ಕೆ ವರದಿ ಸಲ್ಲಿಸುವುದನ್ನು ತಪ್ಪಿಸಲು ಹೊಸ ಸುಧಾರಣೆಗೆ ಸರ್ಕಾರದ ಚಿಂತನೆಯೇನು ;

(ಆ) ರಾಜ್ಯದಲ್ಲಿ ಹಲವಾರು ಘಟನೆಗಳ ಗುಪ್ತದಳ ವೈಫಲ್ಯದಿಂದಾಗಿ ತಪ್ಪು ಸಂದೇಶವು ಸರ್ಕಾರಕ್ಕೆ ರವಾನೆಯಾಗುತ್ತಿರುವುದನ್ನು ಗಮನಿಸಲಾಗಿದೆಯೇ ;

(ಇ) ಗ್ರಾಮ, ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಸಮನ್ವಯ ಕೊರತೆಯೇ ಗುಪ್ತದಳ ವೈಫಲ್ಯಕ್ಕೆ ಕಾರಣವೆಂದು ಭಾವಿಸಲಾಗಿದೆಯೇ ; ಇಲ್ಲವಾದಲ್ಲಿ, ಗುಪ್ತದಳ ವೈಫಲ್ಯಕ್ಕೆ ಕಾರಣವೇನು ?

## ಹುಬ್ಬಳ್ಳಿ–ಧಾರವಾಡ ಅವಳಿ ನಗರಗಳಲ್ಲಿ ಕೊಲೆ, ಸುಲಿಗೆ ಹಾಗೂ ದರೋಡೆಗಳ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೭೭ (೪೮೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹುಬ್ಬಳ್ಳಿ–ಧಾರವಾಡ ಅವಳಿ ನಗರಗಳಲ್ಲಿ ಕಳೆದ ೬ ತಿಂಗಳುಗಳಿಂದ ಕೊಲೆ, ಸುಲಿಗೆ, ದರೋಡೆ ಹಾಗೂ ಸಣ್ಣಪುಟ್ಟ ಗಲಭೆಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಠಾಣೆಗಳವಾರು ಎಷ್ಟು ಪ್ರಕರಣಗಳು ದಾಖಲಾಗಿವೆ ; ಅವುಗಳ ಸಂಪೂರ್ಣ ವಿವರ ನೀಡುವುದು ;

(ಇ) ಕೊಲೆ, ಸುಲಿಗೆ, ದರೋಡೆ ಹಾಗೂ ಸಣ್ಣಪುಟ್ಟ ಗಲಭೆಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಹೊಸ ಮದ್ಯ ಮಳಿಗೆಗಳ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೭೮ (೪೭೪) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಗೆ ಈ ಸಾಲಿನಲ್ಲಿ ಎಷ್ಟು ವಿವಿಧ ಹೊಸ ಮದ್ಯ ಮಳಿಗೆಗಳಿಗೆ ಲೈಸನ್ಸ್ ಮಂಜೂರು ಮಾಡಲು ಸರ್ಕಾರ ತೀರ್ಮಾನಿಸಿದೆ ; ಅವುಗಳು ಯಾವುವು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಇದರ ವಿವಿಧ ಲೈಸೆನ್ಸ್ ಪಡೆಯಲು ಮಾನದಂಡವೇನು ; ಇದನ್ನು ಖಾಸಗಿ ವ್ಯಕ್ತಿಗಳಿಗೆ ನೀಡಲು ತೀರ್ಮಾನಿಸಲಾಗಿದೆಯೇ ; ಇದಕ್ಕಾಗಿ ಎಷ್ಟು ಖಾಸಗಿ ವ್ಯಕ್ತಿಗಳು ಯಾವ ಯಾವ ಸ್ಥಳಗಳಲ್ಲಿ ಬೇಡಿಕೆ ಇಟ್ಟಿರುತ್ತಾರೆ ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಇದರ ಮಂಜೂರಾತಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಮಂಜೂರು ಮಾಡಲು ಯಾವ ಮಾನದಂಡ ಅನುಸರಿಸಲಾಗುವುದು ಹಾಗೂ ಅನುಪಾತವೇನು ? (ಸಂಪೂರ್ಣ ವಿವರ ನೀಡುವುದು)

## ಸಮಾನ ಕೆಲಸ ಸಮಾನ ವೇತನ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೭೯ (೪೭೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರಿ ಇಲಾಖೆ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಖಾಯಂ ನೌಕರರ ಮಾದರಿಯಲ್ಲೇ "ಸಮಾನ ಕೆಲಸಕ್ಕೆ ಸಮಾನ ವೇತನ" ದ ಅಡಿಯಲ್ಲಿ ವೇತನ ನೀಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ; ಈ ಬಗ್ಗೆ ನ್ಯಾಯಾಲಯದ ಆದೇಶವೇನಾದರೂ ಬಂದಿದೆಯೇ ; (ಆದೇಶದ ಪ್ರತಿಯೊಂದಿಗೆ ವಿವರ ನೀಡುವುದು)

(ಆ) ಈ ಪದ್ಧತಿಯು ಸರ್ಕಾರದ ಯಾವ ಯಾವ ಇಲಾಖೆಗಳಿಗೆ ಅನ್ವಯಿಸುತ್ತವೆ ; ಇದರಡಿಯಲ್ಲಿ ಹಾಲಿ ಎಷ್ಟು ಜನರು ಕೆಲಸ ನಿರ್ವಹಿಸುತ್ತಿದ್ದಾರೆ ; (ಇಲಾಖಾವಾರು ಸಂಪೂರ್ಣ ವಿವರ ನೀಡುವುದು)

(ಇ) ಈ ಪದ್ಧತಿಯನ್ನು ಸರ್ಕಾರವು ಜಾರಿಗೆ ತರಲು ಯಾವ ಕಾಲಮಿತಿಯನ್ನು ನಿಗಧಿಗೊಳಿಸಿಕೊಂಡಿದೆ ? (ವಿವರ ನೀಡುವುದು)

## ಅಬಕಾರಿ ಇಲಾಖೆಯ ಗ್ರಾಮ ಸಭೆಗಳ ಕುರಿತು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು):–**

೩೮೦ (೪೩೦) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದರಾಬಾದ್–ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಬಕಾರಿ ಇಲಾಖೆಯಿಂದ ಎಷ್ಟು ಗ್ರಾಮ ಸಭೆಗಳನ್ನು ನಡೆಸಲಾಗಿದೆ ; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

(ಆ) ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಅಬಕಾರಿ ಇಲಾಖೆಯವರಿಂದ ಅನಧಿಕೃತ ಮತ್ತು ಕಳ್ಳಬಟ್ಟಿ ಸಾರಾಯಿ ಹಾವಳಿಯನ್ನು ತಡೆಗಟ್ಟಲು ಯಾವ ಯಾವ ಗ್ರಾಮಗಳಲ್ಲಿ ಗ್ರಾಮ ಸಭೆಗಳನ್ನು ನಡೆಸಲಾಗಿದೆ ; ಈ ಸಭೆ ನಡೆದ ಗ್ರಾಮದ ಹೆಸರು, ಗ್ರಾಮಸಭೆಯ ಫೋಟೋಗಳೊಂದಿಗೆ, ಅಧೀನ ವಲಯಗಳೊಂದಿಗೆ, ಹಾಗೆ ಇಲಾಖೆ ಅಧಿಕಾರಿ/ಸಿಬ್ಬಂದಿಗಳವಾರು ವರ್ಷವಾರು, ಗ್ರಾಮವಾರು ಹಾಗೂ ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು ;

(ಇ) ಹೈದರಾಬಾದ್–ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ ಅಬಕಾರಿ ಇಲಾಖೆಯಿಂದ ಗ್ರಾಮ ಸಭೆಗಳನ್ನು ಗ್ರಾಮ ಸಭೆ ನಡೆಸದೇ ಇರುವುದಕ್ಕೆ ಕಾರಣಗಳೇನು ; ಈ ಸಭೆಗಳನ್ನು ನಡೆಸದೇ ಇರುವ

ಅಧಿಕಾರಿ/ಅಧೀನ ಸಿಬ್ಬಂದಿಗಳ ಮೇಲೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ ? (ವಲಯವಾರು ಸಂಪೂರ್ಣ ವಿವರ ನೀಡುವುದು)

## ಆರು ಜಿಲ್ಲೆಗಳಲ್ಲಿ ೩೭೧(ಜೆ) ಅಡಿಯಲ್ಲಿ ಮೀಸಲಿಟ್ಟ ಹುದ್ದೆಗಳ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೩೮೧ (೪೩೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್–ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳಲ್ಲಿ ಸರ್ಕಾರಿ ಇಲಾಖೆಗಳಲ್ಲಿ ಮಂಜೂರಾದ ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; (ಇಲಾಖಾವಾರು, ವೃಂದವಾರು ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಆ) ಅನುಚ್ಛೇದ ೩೭೧(ಜೆ) ಅಡಿಯಲ್ಲಿ ಮೀಸಲಿಟ್ಟ ಹುದ್ದೆಗಳ ಸಂಖ್ಯೆ ಎಷ್ಟು ; ಹೈದ್ರಾಬಾದ್–ಕರ್ನಾಟಕ ಪ್ರದೇಶ ಹೊರತುಪಡಿಸಿ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಮೀಸಲಿಟ್ಟಿರುವ ಹುದ್ದೆಗಳೆಷ್ಟು ; (ಇಲಾಖಾ/ವೃಂದ/ಜಿಲ್ಲಾವಾರು ಪ್ರತ್ಯೇಕ ಮಾಹಿತಿ ನೀಡುವುದು)

(ಇ) ಅನುಚ್ಛೇದ ೩೭೧(ಜೆ) ಅಡಿಯಲ್ಲಿ ಬಡ್ತಿ ಪ್ರಕ್ರಿಯೆಯಲ್ಲಿ ಗೊಂದಲವುಂಟಾಗಿ ಬಡ್ತಿ ಪ್ರಕ್ರಿಯೆ ಸ್ಥಗಿತಗೊಂಡಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಪ್ರಕ್ರಿಯೆಯುನ್ನು ಮತ್ತೆ ಪ್ರಾರಂಭಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ? (ವಿವರ ನೀಡುವುದು)

## ಮುಂಬಡ್ತಿ ಹೊಂದಿದ ಅಧಿಕಾರಿ/ನೌಕರರು ಅದೇ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೩೮೨ (೪೩೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಐದು ವರ್ಷಕ್ಕಿಂತ ಹೆಚ್ಚಿನ ಅವಧಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ವಿವರ ನೀಡುವುದು ;

(ಆ) ಒಂದು ವೃಂದದಿಂದ ಮತ್ತೊಂದು ವೃಂದಕ್ಕೆ ಮುಂಬಡ್ತಿ ಪಡೆದರೂ, ಸಹ ಅದೇ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರನ್ನು ವರ್ಗಾಯಿಸಲು ಏಕೆ ಕ್ರಮ ಕೈಗೊಳ್ಳಲಾಗುತ್ತಿಲ್ಲ ;

(ಇ) ಇಂತಹ ಅಧಿಕಾರಿ/ನೌಕರರನ್ನು ಕೂಡಲೇ ಬೇರೆ ಇಲಾಖೆಗಳಿಗೆ ವರ್ಗಾಯಿಸಲು ಎಷ್ಟು ದಿನಗಳಲ್ಲಿ ಕ್ರಮ ವಹಿಸಲಾಗುವುದು ; (ಸ್ಪಷ್ಟ ಮಾಹಿತಿ ನೀಡುವುದು)

(ಈ) ೦೫ ವರ್ಷಗಳಿಂದ ಮುಂಬಡ್ತಿ ಹೊಂದಿದವರು ಕೂಡ ಒಂದೇ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅಂತಹ ಅಧಿಕಾರಿ/ನೌಕರರ ಹುದ್ದೆ/ಹೆಸರು/ಇಲಾಖೆವಾರು ಸಂಪೂರ್ಣ ವಿವರ ನೀಡುವುದು ?

## ಪೊಲೀಸ್ ಪೇದೆ ಮತ್ತು ಸಿಬ್ಬಂದಿಗಳಿಗೆ ನೀಡುತ್ತಿರುವ ಸೌಲಭ್ಯಗಳು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೩೮೩ (೪೩೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಒಟ್ಟು ಪೊಲೀಸ್ ಸಿಬ್ಬಂದಿಗಳೆಷ್ಟು ; (ಪೊಲೀಸ್ ಪೇದೆಯಿಂದ ಹಿಡಿದು ಐ.ಪಿ.ಎಸ್. ಅಧಿಕಾರಿಗಳವರೆಗಿನ ಸಿಬ್ಬಂದಿಗಳ ವಿವರ ನೀಡುವುದು)

(ಆ) ಪೊಲೀಸ್ ಪೇದೆಗಳು ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಪೊಲೀಸ್ ಪೇದೆಗಳ ಬೇಡಿಕೆಗಳೇನು ; ಈ ಬೇಡಿಕೆಗಳನ್ನು ಈಡೇರಿಸಲು ಕೈಗೊಂಡಿರುವ ಇಲಾಖೆಯ ಕ್ರಮಗಳೇನು ; (ಮಾಹಿತಿ ಒದಗಿಸುವುದು)

(ಈ) ಇಲ್ಲಿಯವರೆಗೆ ಎಷ್ಟು ಬೇಡಿಕೆಗಳನ್ನು ಈಡೇರಿಸಲಾಗಿದೆ ; ಮತ್ತು ಬಾಕಿ ಇರುವ ಬೇಡಿಕೆಗಳ ಕುರಿತು ಸರ್ಕಾರದ ನಿಲುವೇನು ; ಹಾಗೆ ಪ್ರತಿ ಠಾಣೆಯಲ್ಲಿ ಪೇದೆಗಳಿಗೆ ವಾರದ ರಜೆ ನೀಡದೇ ಇರಲು ಕಾರಣಗಳೇನು ? (ಸಂಪೂರ್ಣ ವಿವರ ನೀಡುವುದು)

## ದಿನಗೂಲಿ ನೌಕರರನ್ನು ಖಾಯಂಗೊಳಿಸುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೩೮೪ (೪೩೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ವಿವಿಧ ಇಲಾಖೆಯಲ್ಲಿರುವ ದಿನಗೂಲಿ ನೌಕರರನ್ನು ಖಾಯಂಗೊಳಿಸಲಾಗುತ್ತಿದೆಯೇ ; ಹಾಗಿದ್ದಲ್ಲಿ, ರಾಜ್ಯದಲ್ಲಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು ; ಹಾಗೂ ಬೀದರ್ ಜಿಲ್ಲೆಯಲ್ಲಿ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಈ ನೌಕರರುಗಳನ್ನು ಯಾವ ಮಾನದಂಡ ಅನುಸರಿಸಿ ಖಾಯಂಗೊಳಿಸಲಾಗುತ್ತಿದೆ ; (ಇತ್ತೀಚಿನ ಸರ್ಕಾರಿ ಆದೇಶಗಳ ಪ್ರತಿ ನೀಡುವುದರೊಂದಿಗೆ ವಿವರ ನೀಡುವುದು)

(ಇ) ಈ ಎಲ್ಲಾ ದಿನಗೂಲಿ ನೌಕರರನ್ನು ಖಾಯಂ ಗೊಳಿಸುತ್ತಿರುವುದರಿಂದ ರಾಜ್ಯ ಸರ್ಕಾರಕ್ಕೆ ಆರ್ಥಿಕವಾಗಿ ಹೆಚ್ಚುವರಿಯಾಗಿ ತಗಲುವ ವೆಚ್ಚವೆಷ್ಟು ? (ವಿವರ ನೀಡುವುದು)

**ರಾಜ್ಯದಲ್ಲಿನ ಕೆ.ಎ.ಎಸ್. ಹುದ್ದೆಗಳನ್ನು ಭರ್ತಿ ಮಾಡುವ ಕುರಿತು**

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೩೮೫ (೪೪೯) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಪ್ರಸ್ತುತ ಖಾಲಿ ಇರುವ ಒಟ್ಟು ಸರ್ಕಾರಿ ಹುದ್ದೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಆ) ರಾಜ್ಯದಲ್ಲಿ ಪ್ರಸ್ತುತ ಖಾಲಿ ಇರುವ ಒಟ್ಟು ಕರ್ನಾಟಕ ಆಡಳಿತ ಸೇವೆ (ಕೆ.ಎ.ಎಸ್) ಹುದ್ದೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡದಿರುವ ಪರಿಣಾಮದಿಂದಾಗಿ, ರಾಜ್ಯದ ವಿದ್ಯಾವಂತ ಹಾಗೂ ಪ್ರತಿಭಾವಂತ ಯುವಕರ ವಯೋಮಿತಿ ಮುಗಿದು ನಿರುದ್ಯೋಗಿಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ;

(ಈ) ಲಕ್ಷಾಂತರ ಹುದ್ದೆಗಳು ಖಾಲಿಯಿರುವ ಪರಿಣಾಮ ಸರ್ಕಾರಿ ಸೇವೆಗಳು ಮತ್ತು ಕಾರ್ಯ ಕಲಾಪಗಳಲ್ಲಿ ತೀವ್ರ ವಿಳಂಬವಾಗುತ್ತಿರುವುದು ಮತ್ತು ಗುಣಮಟ್ಟದ ಸೇವೆಯಲ್ಲಿ ಲೋಪವಾಗುತ್ತಿರುವುದು ನಿಜವಲ್ಲವೇ;

(ಉ) ಈ ಸಂಬಂಧ ಸರ್ಕಾರವು ಯಾವ ರೀತಿಯ ಚಿಂತನೆ ನಡೆಸಿದೆ; ಖಾಲಿ ಹುದ್ದೆಗಳನ್ನು ತುಂಬುವ ನಿಟ್ಟಿನಲ್ಲಿ ಯಾವ ರೀತಿ ಕ್ರಮ ವಹಿಸುವುದು?

## ದೊರೆ ಕೆರೆಗೆ ಒಳಚರಂಡಿಯ ನೀರು ಸೇರುತ್ತಿರುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೩೮೬ (೪೪೮) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು, ಉತ್ತರಹಳ್ಳಿಯ ದೊರೆ ಕೆರೆಗೆ ಸುತ್ತಲಿನ ಪದ್ಮನಾಭನಗರ, ಕುಮಾರಸ್ವಾಮಿ ಬಡಾವಣೆ ವಸಂತಪುರ, ಗೌಡನಪಾಳ್ಯ, ಬನಶಂಕರಿ ಭಾಗದ ಬಡಾವಣೆಗಳ ಒಳಚರಂಡಿ ನೀರು ಹರಿಯುತ್ತಿರುವುದು ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಗಮನಕ್ಕೆ ಬಂದಿದೆಯೇ;

(ಆ) ಈ ಸಂಬಂಧ ಕೆರೆ ಮಲೀನವಾಗದಂತೆ, ಒಳಚರಂಡಿಯ ನೀರನ್ನು ವೈಜ್ಞಾನಿಕ ರೀತಿಯಲ್ಲಿ ನಿರ್ವಹಣೆ ಮಾಡಲು ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು?

## ಬಿ.ಎಂ.ಆರ್.ಡಿ.ಎ. ಅನಧಿಕೃತ ಬಡಾವಣೆಗಳ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೩೮೭ (೪೪೭) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೦೫ ರಿಂದ ಇಲ್ಲಿಯವರೆಗೆ ಬಿ.ಎಂ.ಆರ್.ಡಿ.ಎ. ವ್ಯಾಪ್ತಿಯಲ್ಲಿ ಸಕ್ಷಮ ಯೋಜನಾ ಪ್ರಾಧಿಕಾರದಿಂದ ಯಾವ ಯಾವ ಬಡಾವಣೆಗಳಿಗೆ ಅನುಮತಿ ನೀಡಲಾಗಿದೆ;

(ಆ) ಬಿ.ಎಂ.ಆರ್.ಡಿ.ಎ. ಅಪ್ರೂವ್ಡ್ ಎಂದು ಹೇಳಿಕೊಂಡು ಅನುಮತಿ ಪಡೆಯದ ಅನಧಿಕೃತ ಬಡಾವಣೆಗಳು ಯಾವುವು;

(ಇ) ಈ ರೀತಿಯ ಅನಧಿಕೃತ ಬಡಾವಣೆಗಳನ್ನು ಬಿ.ಎಂ.ಆರ್.ಡಿ.ಎ. ವತಿಯಿಂದ ಪಟ್ಟಿ ಮಾಡಿ ಸಾರ್ವಜನಿಕರ ಗಮನಕ್ಕೆ ತರಲಾಗಿದೆಯೇ; ಈ ರೀತಿಯ ಪಟ್ಟಿಯನ್ನು ಸಾರ್ವಜನಿಕರ ಗಮನಕ್ಕೆ ತರಲಾಗಿದ್ದು ಯಾವಾಗ ಈ ರೀತಿ ಗಮನಕ್ಕೆ ತರಲು ಐದಾರು ವರ್ಷ ತಡವಾಗಲು ಕಾರಣವೇನು;

(ಈ) ಬಿ.ಎಂ.ಆರ್.ಡಿ.ಎ. ಅನುಮೋದಿತ ಬಡಾವಣೆ ಎಂದು ಜಾಹೀರಾತು ಮಾಡಿ ವಂಚಿಸುವವರ ವಿರುದ್ಧ ಯಾಕೆ ಇನ್ನೂ ಕಠಿಣ ಕ್ರಮು ತೆಗೆದುಕೊಳ್ಳಲಾಗಿಲ್ಲ; ಕಠಿಣ ಕ್ರಮು ತೆಗೆದುಕೊಳ್ಳಲಾಗುವುದು ಯಾವಾಗ;

(ಉ) ಇಂತಹ ಬಡಾವಣೆಗಳ ಮುಂದೆ ಬಿ.ಎಂ.ಆರ್.ಡಿ.ಎ. ವತಿಯಿಂದ ಅನುಮತಿ ನೀಡಲಾಗಿಲ್ಲವೆಂದು ಸೂಚನಾ ಫಲಕ ಹಾಕಲು ಸರ್ಕಾರ ಮುಂದಾಗುವುದೇ?

## ಬೆಂಗಳೂರು ಬಾಗಲೂರಿನ ಆರಕ್ಷಕ ಠಾಣೆಯಲ್ಲಿ ನಿವೇಶನ ವಂಚಿತರ ವಿರುದ್ಧ ದೂರು ದಾಖಲಿಸಿರುವ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೮೮ (೧೬೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಬಾಗಲೂರಿನ ಆರಕ್ಷಕ ಠಾಣೆಯಲ್ಲಿ ೨೩.೧೧.೨೦೧೫ರ ಮೊಕದ್ದಮೆ ಸಂಖ್ಯೆ:೨೦೮/೨೦೧೫ರ ಆರೋಪಿಗಳ ಮೇಲೆ ಈವರೆಗೆ ಎಷ್ಟು ಜನ ನಿವೇಶನ ವಂಚಿತ ಸಂಘದ ಸದಸ್ಯರು ದೂರುಗಳನ್ನು ದಾಖಲಿಸಿರುತ್ತಾರೆ; ಇವರುಗಳಿಗೆ ನ್ಯಾಯ ಒದಗಿಸಲು ಸಂಬಂಧಿಸಿದ ಹಿರಿಯ ಅಧಿಕಾರಿಗಳು ಕೈಗೊಂಡಿರುವ ಕ್ರಮಗಳೇನು; ಈವರೆವಿಗೂ ದೂರು ನೀಡಿರುವ ದೂರುದಾರರ ಹೆಸರು ಹಾಗೂ ಇತರೆ ಪೂರ್ಣ ವಿವರಗಳನ್ನು ಒದಗಿಸುವುದು;

(ಆ) ಕಳೆದ ಒಂದು ವರ್ಷದಿಂದ ಈವರೆವಿಗೆ ಯಾವ ಯಾವ ಅಧಿಕಾರಿಗಳು, ಯಾರು ಯಾರನ್ನು ತನಿಖೆಗೆ ಒಳಪಡಿಸಿರುತ್ತಾರೆ; ಸದರಿ ತನಿಖಾ ವರದಿ ಹಾಗೂ ತನಿಖೆ ಮೇರೆಗೆ ಸರ್ಕಾರ ಕೈಗೊಂಡಿರುವ ಕ್ರಮದ ಪೂರ್ಣ ವಿವರ ಒದಗಿಸುವುದು;

(ಇ) ಮೇಲ್ಕಂಡ ಆರೋಪಿಗಳು ತಮ್ಮ ಹಾಗೂ ಕುಟುಂಬದ ಯಾರ ಯಾರ ಹೆಸರಿನಲ್ಲಿ, ಎಲ್ಲೆಲ್ಲಿ ಎಷ್ಟೆಷ್ಟು ಬೆಲೆಬಾಳುವ ಜಮೀನು/

ನಿವೇಶನಗಳನ್ನು ಖರೀದಿಸಿರುತ್ತಾರೆ; ಅವುಗಳನ್ನು ಕೂಡಲೇ ವಶಕ್ಕೆ ಪಡೆದು ನಿವೇಶನ ವಂಚಿತರ ಹಣ ವಾಪಸ್ ಕೊಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಅವರು ಹೊಂದಿರುವ ಜಮೀನು ಹಾಗೂ ನಿವೇಶನಗಳ ಪೂರ್ಣ ವಿವರ ನೀಡುವುದು)

(ಈ) ಇನ್ನು ಎಷ್ಟು ಜನ ಆರೋಪಿಗಳನ್ನು ಕಳೆದ ಎರಡು ವರ್ಷಗಳಿಂದ ದಸ್ತಗಿರಿ ಮಾಡಿರುವುದಿಲ್ಲ; ಇದು ಇಲಾಖಾಧಿಕಾರಿಗಳ ದುರುದ್ದೇಶಪೂರ್ವಕ ವೈಫಲ್ಯವಾಗಿದ್ದು ಇಂತಹ ಅಧಿಕಾರಿಗಳ ಮೇಲೆ ಇಲಾಖಾ ಆಯುಕ್ತರು ಹಾಗೂ ಸರ್ಕಾರ ಕೈಗೊಳ್ಳುವ ಕ್ರಮಗಳೇನು ಹಾಗೂ ದೂರುದಾರರಿಗೆ ಯಾವ ರೀತಿ ನ್ಯಾಯ ಒದಗಿಸಲಾಗುವುದು?

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ೬೯ನೇ ವಾರ್ಡ್ ಕಾಮಗಾರಿ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೮೯ (೧೬೬) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ೬೯ನೇ ವಾರ್ಡ್‌ನಲ್ಲಿ ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಯವರು ಯಾವ ಯಾವ ಕಾಮಗಾರಿಗಳಿಗೆ ಶಂಕುಸ್ಥಾಪನೆ ಮಾಡಿರುತ್ತಾರೆ; (ಸದರಿ ಕಾಮಗಾರಿಗಳ ಪೂರ್ಣ ವಿವರ ಒದಗಿಸುವುದು)

(ಆ) ಮೇಲ್ಕಂಡ ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಹಣವನ್ನು ಸರ್ಕಾರ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಂಜೂರು ಮಾಡಿರುತ್ತದೆ;

(ಇ) ಶಂಕುಸ್ಥಾಪನೆ ಆದ ನಂತರವೂ ಈವರೆಗೆ ಯಾವುದೇ ಕಾಮಗಾರಿಯನ್ನು ಪ್ರಾರಂಭಿಸದಿರಲು ಕಾರಣಗಳೇನು; ಕೂಡಲೇ ಸದರಿ ಕಾಮಗಾರಿಗಳನ್ನು ಪ್ರಾರಂಭಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು;

(ಈ) ಮೇಲ್ಕಂಡ ವಾರ್ಡ್‌ನ ರಕ್ಕಸಿಹಳ್ಳದ ಮಳೆ ನೀರು ಚರಂಡಿ ಕೆಲಸಕ್ಕಾಗಿ ಟೆಂಡರ್ ಕರೆಯಲಾಗಿದೆಯೇ; ಇಲ್ಲದಿದ್ದಲ್ಲಿ ಕಳೆದ ೪-೫ ವರ್ಷಗಳಿಂದ ಮಂಜೂರಾದ ಕಾಮಗಾರಿ ಮಾಡದೇ, ವಿಳಂಬ ಮಾಡಲು ಕಾರಣಗಳೇನು? (ಪೂರ್ಣ ವಿವರ ನೀಡುವುದು)

## ಕೇಂದ್ರ ಸರ್ಕಾರದಿಂದ ಬಿ.ಬಿ.ಎಂ.ಪಿ.ಗೆ ನೀಡಿದ ಅನುದಾನದ ಬಗ್ಗೆ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೩೯೦ (೧೬೮) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೇಂದ್ರ ಸರ್ಕಾರದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸ್ವಚ್ಛಭಾರತ (ಅಭಿಯಾನ) ಯೋಜನೆಯಡಿ ಇದುವರೆವಿಗೂ ಬಿಡುಗಡೆಯಾಗಿರುವ ಹಣವೆಷ್ಟು; ಬಿಡುಗಡೆಯಾದ ಹಣದಲ್ಲಿ ಯಾವ ಯಾವ ಕಾರ್ಯಗಳನ್ನು ಕೈಗೊಳ್ಳಲಾಗಿದೆ; (ವಾರ್ಡುವಾರು ವಿವರ ನೀಡುವುದು)

(ಆ) ೨೦೧೪-೨೦೧೬ರ ವರೆವಿಗೆ ಕೇಂದ್ರ ಸರ್ಕಾರ ಯಾವ ಯಾವ ಯೋಜನೆಯಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಣ ಬಿಡುಗಡೆ ಮಾಡಿದೆ; ಅದರಿಂದ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ?

**ಸರ್ಕಾರ ಕಳೆದ ೩ ವರ್ಷಗಳಿಂದ ಮಾಡಿದ ಸಾಲದ ವಿವರ ಕುರಿತು**

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೯೧ (೪೦೯) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಆಂತರಿಕ ಸಾಲ ಹಾಗೂ ಇದರ ವಾಸ್ತವ ಬಡ್ಡಿ ಪಾವತಿಯ ವಿವರಗಳನ್ನು ವರಮಾನ ಮತ್ತು ಮರುಪಾವತಿಯ ಮಾಹಿತಿಯನ್ನು ೨೦೧೩–೧೪, ೨೦೧೪–೧೫ ಹಾಗೂ ೨೦೧೫–೧೬ರ ಬಜೆಟ್ ಅಂದಾಜುವಾರು ತಿಳಿಸುವುದು;

(ಆ) ಈ ಪ್ರಕಾರದಲ್ಲಿ ಬಜೆಟ್ ಅಂದಾಜು ಮತ್ತು ವಾಸ್ತವದಲ್ಲಾದ ಖರ್ಚಿನ ವಿವರಗಳನ್ನು ಸ್ವಂತ ಆದಾಯ ಕೇಂದ್ರದಿಂದ ಲಭ್ಯವಾದ ತೆರಿಗೆಪಾಲು ಇತರೆ ಅನುದಾನವಾರು ವೆಚ್ಚ ಬಂಡವಾಳ ವೆಚ್ಚ ಸಾಲ ಮತ್ತು ಮುಂಗಡ ರೂಪದಲ್ಲಿ ಕಳೆದ ಮೂರು ವರ್ಷಗಳ ವಿವರ ಒದಗಿಸುವುದು;

(ಇ) ಈವರೆಗೆ ರಾಜ್ಯ ಸರ್ಕಾರವು ಸಾಲ ಮಾಡಿರುವ ವಿವರ ಮತ್ತು ಯಾವ ಉದ್ದೇಶಕ್ಕಾಗಿ ಸಾಲ ತೆಗೆಯಲಾಗಿದೆ; ಸಾಲದ ಮೊತ್ತವೆಷ್ಟು; (ವಿವರ ನೀಡುವುದು)

(ಈ) ಎಲ್ಲಿಂದ ಸಾಲ ಪಡೆಯಲಾಗಿದೆ ಸಾಲ ಪಡೆಯಲು ಅನುಸರಿಸಿದ ಕ್ರಮಗಳೇನು; ಇದಕ್ಕೆ ವಿಧಿಸುವ ಬಡ್ಡಿ ಮೊತ್ತ ಎಷ್ಟು; ಇದರ ತೀರುವಳಿ ಬಗ್ಗೆ ಸರ್ಕಾರದ ಕ್ರಮಗಳೇನು? (ವಿವರ ನೀಡುವುದು)

## ರಾಜ್ಯಗಳಲ್ಲಿನ ಬಾರ್ ಹಾಗೂ ಪಬ್‌ಗಳ ಅವಧಿಗಳ ಬಗ್ಗೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೩೯೨ (೪೨೭) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಬಾರ್ ಹಾಗೂ ಪಬ್‌ಗಳ ವಹಿವಾಟು ಅವಧಿಯನ್ನು ವಿಸ್ತರಿಸಿ, ರಾಜ್ಯ ಅಬಕಾರಿ ಇಲಾಖೆ ಆದೇಶ ಹೊರಡಿಸಿರುವುದು ನಿಜವೇ;

(ಆ) ಇದರ ಸಾಧಕ–ಬಾಧಕಗಳನ್ನು ಸರ್ಕಾರ ಅವಲೋಕಿಸಿದೆಯೇ;

(ಇ) ವಹಿವಾಟು ಅವಧಿಯನ್ನು ವಿಸ್ತರಿಸಿರುವುದರಿಂದ ಉಂಟಾಗುವ ಸಮಸ್ಯೆಗಳೇನು; ಇವುಗಳ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು;

(ಈ) ವಹಿವಾಟು ಅವಧಿ ವಿಸ್ತರಣೆಯಿಂದಾಗಿ ನಗರದಲ್ಲಿ ಕ್ರಿಮಿನಲ್ ಚಟುವಟಿಕೆಗಳು ಹೆಚ್ಚಾಗಿವೆಯೇ ; ಹಾಗಿದ್ದಲ್ಲಿ ವಿಸ್ತರಣೆ ಅವಧಿಯನ್ನು ಹಿಂಪಡೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ?

## ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಮೀಸಲಾತಿ ಸೌಲಭ್ಯ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೩೯೩ (೪೧೮) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಯಾರು ಯಾರಿಗೆ ಮೀಸಲಾತಿ ಸೌಲಭ್ಯವನ್ನು ಸರ್ಕಾರ ಕಲ್ಪಿಸಿಕೊಟ್ಟಿದೆ; ಯಾವ ಯಾವ ವರ್ಗಕ್ಕೆ ಎಷ್ಟು ಪ್ರಮಾಣದ (ಶೇಕಡಾವಾರು) ಮೀಸಲಾತಿಯನ್ನು ಕಲ್ಪಿಸಲಾಗಿದೆ;

(ಆ) ಮೀಸಲಾತಿಯ ವ್ಯಾಪ್ತಿಗೆ ಒಳಪಡುವ ಜನಸಂಖ್ಯೆ ಹೆಚ್ಚು ಇದ್ದರೂ ಮೀಸಲಾತಿ ಶೇ.೫೦ಕ್ಕೆ ಸೀಮಿತಗೊಳಿಸಲು ಕಾರಣವೇನು;

(ಇ) ಶೇ.೫೦ ಕ್ಕೂ ಹೆಚ್ಚು ಮೀಸಲಾತಿಯನ್ನು ಯಾವ ಯಾವ ರಾಜ್ಯದಲ್ಲಿ ಒದಗಿಸಲಾಗಿದೆ; ಎಷ್ಟು ಪ್ರಮಾಣ ಒದಗಿಸಲಾಗಿದೆ; (ವಿವರ ನೀಡುವುದು)

(ಈ) ಮೀಸಲಾತಿ ಪ್ರಮಾಣವನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಇತರೆ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಜನಸಂಖ್ಯೆಗನುಗುಣವಾಗಿ ಹೆಚ್ಚಿಸಲು ಸರ್ಕಾರ ಯೋಚಿಸಿದೆಯೇ;

(ಉ) ಯೋಚಿಸಿದ್ದಲ್ಲಿ, ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಾಗುವುದು? (ವಿವರ ನೀಡುವುದು)

## ಅತ್ಯಾಚಾರ ಮತ್ತು ಆಸಿಡ್ ದಾಳಿಗೊಳಗಾದ ಸಂತ್ರಸ್ತೆಯರಿಗೆ ಪರಿಹಾರ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೩೯೪ (೪೧೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಳೆದ ೦೩ ವರ್ಷಗಳಲ್ಲಿ ಮಹಿಳೆಯರ ಮೇಲೆ ನಡೆದಿರುವ ಅತ್ಯಾಚಾರ ಮತ್ತು ಆಸಿಡ್ ದಾಳಿಗಳ ಸಂಖ್ಯೆ ಎಷ್ಟು; ಅಂತಹ ದಾಳಿಗಳಿಗೆ ಒಳಗಾದ ಸಂತ್ರಸ್ತೆಯರು ಯಾರು, ಯಾರು; (ಪೂರ್ಣ ವಿವರ ನೀಡುವುದು)

(ಆ) ಈ ಪ್ರಕರಣಗಳಲ್ಲಿ ತುತ್ತಾಗಿರುವ ಸಂತ್ರಸ್ತೆಯರಿಗೆ ನೀಡಲಾಗಿರುವ ಪರಿಹಾರದ ಮೊತ್ತ ಎಷ್ಟು; ಪರಿಹಾರ ನೀಡಲು ಇರುವ ನಿಯಮಾವಳಿಗಳು ಯಾವುವು; ಕಾಲಮಿತಿಯಲ್ಲಿ ಪರಿಹಾರ ನೀಡದಿದ್ದರೆ ಅಂತಹವರ ಮೇಲೆ ಸರ್ಕಾರ ಜರುಗಿಸಲಾಗುವ ಕ್ರಮಗಳೇನು; ಜರುಗಿಸಿದ್ದಲ್ಲಿ, ಪ್ರಕರಣವಾರು ಪೂರ್ಣ ವಿವರ ನೀಡುವುದು;

(ಇ) ಕೇಂದ್ರ ಸರ್ಕಾರದಲ್ಲಿ ನಿರ್ಭಯ ಪ್ರಕರಣದ ನಂತರ ನಿರ್ಭಯ ನಿಧಿಯಿಂದ ಅತ್ಯಾಚಾರ ಹಾಗೂ ಆಸಿಡ್ ದಾಳಿಗೆ ಒಳಗಾದ ಸಂತ್ರಸ್ತರಿಗೆ ಕೇಂದ್ರದಿಂದ ರಾಜ್ಯ ಸರ್ಕಾರ ಪಡೆದಿರುವ ಪರಿಹಾರ ಮೊಬಲಗು ಎಷ್ಟು; ಆ ಮೊತ್ತದಲ್ಲಿ ಯಾರು ಯಾರಿಗೆ ಪರಿಹಾರ ನೀಡಲಾಗಿದೆ? (ಪೂರ್ಣ ವಿವರ ನೀಡುವುದು)

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಅತ್ಯಾಚಾರ ಪ್ರಕರಣಗಳು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೩೯೫ (೪೨೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಹಿಳೆಯರು ಮತ್ತು ಅಪ್ರಾಪ್ತ ಹೆಣ್ಣುಮಕ್ಕಳ ಮೇಲೆ ನಡೆದ ಅತ್ಯಾಚಾರ ಪ್ರಕರಣಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಅತ್ಯಾಚಾರಕ್ಕೊಳಗಾಗಿ ಸಾವಿಗೀಡಾದ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಜಿಲ್ಲೆಯಲ್ಲಿ ಅತ್ಯಾಚಾರಕ್ಕೀಡಾದ ಎಷ್ಟು ಪ್ರಕರಣಗಳಲ್ಲಿ ಸಂತ್ರಸ್ತೆಯರಿಗೆ ಕಾನೂನು ರೀತ್ಯಾ ಪರಿಹಾರ ನೀಡಲಾಗಿದೆ; ಆ ಪರಿಹಾರದ ಮೊಬಲಗು ಎಷ್ಟು; (ಪ್ರಕರಣವಾರು ಮಾಹಿತಿ ನೀಡುವುದು)

(ಈ) ಸಂತ್ರಸ್ತೆಯರಿಗೆ ಪರಿಹಾರ ನೀಡದಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಹಾಗೆ ನೀಡದಿರಲು ಕಾರಣವೇನು? (ಪೂರ್ಣ ಮಾಹಿತಿ ನೀಡುವುದು)

## ಲೋಕಾಯುಕ್ತದಲ್ಲಿ ದಾಖಲಾದ ಪ್ರಕರಣಗಳ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೯೬ (೪೮೮) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಲೋಕಾಯುಕ್ತ ಹೊರತುಪಡಿಸಿ ಪ್ರತ್ಯೇಕ A.C.B. ರಚನೆ ಆದ ಮೇಲೆ ದಾಖಲಾಗಿರುವ ಪ್ರಕರಣಗಳೆಷ್ಟು; (ಯಾವ ಯಾವ ಇಲಾಖೆ ವಿವರ ನೀಡುವುದು)

(ಆ) A.C.B. ರಚನೆ ಆಗುವ ಮುಂಚೆ ಇದ್ದ ಪ್ರಕರಣಗಳು ಎಷ್ಟು; ವಿಲೇವಾರಿಯಾದ ಪ್ರಕರಣಗಳೆಷ್ಟು; ಖುಲಾಸೆಗೊಂಡ ಪ್ರಕರಣಗಳೆಷ್ಟು; ಬಾಕಿ ಇರುವ ಪ್ರಕರಣಗಳೆಷ್ಟು;

(ಇ) ಬಾಕಿ ಇರುವ ಪ್ರಕರಣಗಳ ಹೆಸರು ಮತ್ತು ಇಲಾಖೆ ಹಾಗೂ ಪ್ರಕರಣಗಳ ಸಂಖ್ಯೆ ಮಾಹಿತಿ ಒದಗಿಸುವುದು;

(ಈ) A.C.B. ಆದನಂತರ ದಾಖಲಾದ ಪ್ರಕರಣಗಳು ಯಾವ ಹಂತದಲ್ಲಿದೆ; A.C.B. ಯಲ್ಲಿ ದಾಖಲಾಗಿರುವ ಎಲ್ಲಾ ಪ್ರಕರಣಗಳಿಗೆ ಸರ್ಕಾರದಿಂದ ಅನುಮತಿ ನಿರ್ಬಂಧ ಇದೆಯೇ;

(ಉ) ಹಾಗಿದ್ದಲ್ಲಿ, ಎಷ್ಟು ಪ್ರಕರಣಗಳಲ್ಲಿ ಸರ್ಕಾರ ಅನುಮತಿ ನೀಡಿದೆ; ಎಷ್ಟು ಪ್ರಕರಣಗಳಿಗೆ ಸರ್ಕಾರ ಅನುಮತಿ ನೀಡಲು ನಿರಾಕರಿಸಿದೆ; ಅನುಮತಿ ನೀಡಿದ ಪ್ರಕರಣಗಳ ವಿವರ ನೀಡುವುದು?

## ಬೆಂಗಳೂರು ಮಹಾನಗರ ಪಾಲಿಕೆಯಿಂದ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡಗಳಿಗೆ ಮನೆ ನಿರ್ಮಾಣ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೯೭ (೪೧೬) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಈ ಹಿಂದೆ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಗರ ಪ್ರದೇಶಗಳಲ್ಲಿ ಮನೆ ಕಟ್ಟಿಕೊಳ್ಳಲು ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದವರ ಫಲಾನುಭವಿಗಳಿಗೆ ಪ್ರತಿ ಮನೆಗೆ ರೂ.೩.೦೦ ಲಕ್ಷಗಳನ್ನು ನೀಡಲಾಗಿದೆಯೇ;

(ಆ) ಹಾಗಿದ್ದಲ್ಲಿ, ಈ ಮೊತ್ತವನ್ನು ರೂ. ೩.೫೦ ಲಕ್ಷಗಳಿಗೆ ಹೆಚ್ಚಿಸಲಾಗಿದೆಯೇ;

(ಇ) ಈ ನಿಟ್ಟಿನಲ್ಲಿ ನಿಗಧಿಪಡಿಸಿದ ಗುರಿ ಎಷ್ಟು; ಸಾಧನೆಯ ಪ್ರಗತಿ ಎಷ್ಟು; ಎಲ್ಲೆಲ್ಲಿ ಎಷ್ಟೆಷ್ಟು ಮನೆಗಳನ್ನು ಕಟ್ಟಿಸಿ ಕೊಡಲಾಗಿದೆ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದವರ ಅನುದಾನ ಮೀಸಲಾತಿ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೯೮ (೪೧೫) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೧೫, ೨೦೧೫–೧೬ನೇ ಸಾಲುಗಳಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಆಯವ್ಯಯದಲ್ಲಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದವರ ಕಲ್ಯಾಣಕ್ಕೆ ಮೀಸಲು ನಿಗಧಿಪಡಿಸಲಾಗಿದೆಯೇ;

(ಆ) ಹಾಗಿದ್ದಲ್ಲಿ, ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡಗಳಿಗೆ ೨ ವರ್ಷಗಳಲ್ಲಿ ಏನು ಹಣ ನಿಗಧಿಪಡಿಸಲಾಗಿದೆ;

(ಇ) ಈ ಮೊತ್ತವು ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯದಲ್ಲಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡಗಳಿಗೆ ನಿಗಧಿಪಡಿಸಬೇಕಾದ ಶೇ.೧೬.೫೦ ಮತ್ತು ಶೇ.೬.೭೫ರಷ್ಟಕ್ಕೆ ಅನುಗುಣವಾಗಿ ಇಡಲಾಗಿದೆಯೇ;

(ಈ) ಈ ಮೊತ್ತದಲ್ಲಿ ವೆಚ್ಚ ಮಾಡಲಾಗಿರುವ ಹಣ ಎಷ್ಟು; ಯಾವ ಯಾವ ಕಾರ್ಯಕ್ರಮಗಳಿಗೆ ಈ ಹಣವನ್ನು ಖರ್ಚು ಮಾಡಲಾಗಿದೆ?

## ಕಾವೇರಿ ಹೋರಾಟದಲ್ಲಿ ಭಾಗವಹಿಸಿದವರ ವಿರುದ್ಧ ಮೊಕದ್ದಮೆ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೯ (೪೧೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾವೇರಿ ಹೋರಾಟದಲ್ಲಿ ಭಾಗವಹಿಸಿದ ಹೋರಾಟಗಾರರ ವಿರುದ್ಧ ಅನಾವಶ್ಯಕವಾಗಿ ಮೊಕದ್ದಮೆ ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಎಷ್ಟು ಜನರ ವಿರುದ್ಧ ಯಾರ ವಿರುದ್ಧ ಮೊಕದ್ದಮೆ ಹೂಡಲಾಗಿದೆ; (ಹೆಸರು, ವಿಳಾಸ ಸಹಿತ ವಿವರ ನೀಡುವುದು)

(ಇ) ಕಾವೇರಿ ಹೋರಾಟವನ್ನು ಹತ್ತಿಕ್ಕುವ ಉದ್ದೇಶದಿಂದಾಗಿ ಅಮಾಯಕರ ವಿರುದ್ಧ ಹೂಡಲಾಗಿರುವ ಮೊಕದ್ದಮೆಯನ್ನು ಸರ್ಕಾರ ಹಿಂದಕ್ಕೆ ಪಡೆಯುವ ಬಗ್ಗೆ ಕ್ರಮ ಜರುಗಿಸಲಾಗುವುದೇ?

## ಸರ್ಕಾರದ ಸಚಿವಾಲಯಕ್ಕೆ ಸಂಬಂಧಿಸಿದ ಆದೇಶಗಳ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೪೦೦ (೪೬೯) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸರ್ಕಾರದ ಸಚಿವಾಲಯಕ್ಕೆ ಒಳಪಡುವ ಎಲ್ಲಾ ಇಲಾಖೆಗಳಲ್ಲಿ ೩೭೧(ಜೆ) ಅನ್ವಯ ಪ್ರತ್ಯೇಕ ಜೇಷ್ಠತಾ ಪಟ್ಟಿಯನ್ನು ಹೊರಡಿಸಲಾಗಿದೆಯೇ;

(ಆ) ಬಹಳಷ್ಟು ಇಲಾಖೆಗಳು ಹೊರಡಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಬೀದರ್ ಜಿಲ್ಲೆ, ಔರಾದ್ ತಾಲ್ಲೂಕಿನಲ್ಲಿ ಶಾಶ್ವತ ಕುಡಿಯುವ ನೀರಿನ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೪೦೧ (೪೭೦) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೀದರ್ ಜಿಲ್ಲೆಯ ಔರಾದ್ ನಗರ ಸೇರಿ ಹಾಲಹಳ್ಳಿಯಲ್ಲಿ ಶಾಶ್ವತ ಕುಡಿಯುವ ನೀರಿನ ಕಾಮಗಾರಿಗೆ ಹಣ ಬಿಡುಗಡೆಯಾಗಿದ್ದರೂ, ಈ ಕಾಮಗಾರಿ ಪೂರ್ಣಗೊಳ್ಳದಿರಲು ಕಾರಣಗಳೇನು;

(ಆ) ಈ ಕಾಮಗಾರಿ ವಿಳಂಬವಾಗಲು ಕಾರಣಗಳೇನು; ಈ ಕಾಮಗಾರಿಯನ್ನು ಪೂರ್ಣಗೊಳಿಸಿ ಈ ಭಾಗದ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಎಷ್ಟು ಕಾಲಾವಕಾಶ ಬೇಕಾಗುತ್ತದೆ? (ವಿವರ ನೀಡುವುದು)

## ಬೀದರ್ ಜಿಲ್ಲೆಯ ಪೊಲೀಸ್ ವಸತಿ ಗೃಹಗಳ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೦೨ (೪೬೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯ ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವಸತಿ ಸೌಲಭ್ಯ ಕಲ್ಪಿಸಲಾಗಿದೆಯೇ;

(ಆ) ಬೀದರ್ ಜಿಲ್ಲೆಯ ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕಲ್ಪಿಸಿರುವ ವಸತಿ ಗೃಹಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆಯೇ;

(ಇ) ಬೀದರ್ ಜಿಲ್ಲೆಯಲ್ಲಿ ಪೊಲೀಸ್ ಸಿಬ್ಬಂದಿಗಳಿಗೆ ಕಲ್ಪಿಸಿರುವ ವಸತಿ ಗೃಹಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

(ಈ) ಜಿಲ್ಲೆಯ ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ನೂತನ ವಸತಿ ಗೃಹಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಆಸ್ಪತ್ರೆಗಳ ಮೂಲಭೂತ ಸೌಕರ್ಯಗಳ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೪೦೩ (೫೮೯) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ವ್ಯಾಪಿಗೊಳಪಡುವ ಆಸ್ಪತ್ರೆಗಳ ಸಂಖ್ಯೆ ಎಷ್ಟು;

(ಆ) ಸದರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯ ಮತ್ತು ಇತರೆ ಸಿಬ್ಬಂದಿಯ ಸಂಖ್ಯೆ ಎಷ್ಟು; (ಹುದ್ದೆವಾರು ಮಾಹಿತಿ ನೀಡುವುದು)

(ಇ) ಪ್ರಸ್ತುತ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ;

(ಈ) ಸದರಿ ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ನಿಲುವೇನು?

## ಮಧ್ಯರಾತ್ರಿಯವರೆಗೆ ಬಾರ್ ರೆಸ್ಟೋರೆಂಟ್ ತೆರೆದಿರುವುದರಿಂದ ಕಾನೂನು ಸುವ್ಯವಸ್ಥೆ ಕಾಪಾಡುವ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೪೦೪ (೫೧೧) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರ ಸೇರಿದಂತೆ ರಾಜ್ಯದ ಯಾವ ಯಾವ ನಗರ ಪ್ರದೇಶಗಳಲ್ಲಿ ಬಾರ್ ಮತ್ತು ರೆಸ್ಟೋರೆಂಟ್‌ಗಳು ವ್ಯಾಪಾರ ವಹಿವಾಟು ಮಾಡಲು ನಿಗಧಿಪಡಿಸಿರುವ ಸಮಯವೆಷ್ಟು;

(ಆ) ಬಾರ್ ಮತ್ತು ರೆಸ್ಟೋರೆಂಟ್‌ಗಳ ವ್ಯಾಪಾರ ವಹಿವಾಟಿಗೆ ನೀಡಿರುವ ಸಮಯಾವಕಾಶದಿಂದ ಸರ್ಕಾರದ ಬೊಕ್ಕಸಕ್ಕೆ ಬರುತ್ತಿರುವ ಹೆಚ್ಚಿನ ಆದಾಯವೆಷ್ಟು;

(ಇ) ಮಧ್ಯರಾತ್ರಿವರೆಗೆ ಬಾರ್‌ಗಳು ತೆಗೆದಿರುವುದರಿಂದ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಹಾಗಿದ್ದಲ್ಲಿ, ಸಾರ್ವಜನಿಕ ಹಿತದೃಷ್ಟಿಯಿಂದ ಈ ಆದೇಶವನ್ನು ಹಿಂಪಡೆಯಲು ಸರ್ಕಾರ ಗಮನಹರಿಸುವುದೆ? (ವಿವರ ನೀಡುವುದು)

## ಮಹಿಳಾ ಪೊಲೀಸ್ ಠಾಣೆಗಳ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೪೦೫ (೫೧೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪ್ರಸ್ತುತ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು;

(ಆ) ಸದರಿ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಪೊಲೀಸ್ ಸಿಬ್ಬಂದಿಯ ಸಂಖ್ಯೆ ಎಷ್ಟು; (ಜಿಲ್ಲಾವಾರು, ಹುದ್ದೆವಾರು ಮಾಹಿತಿ ನೀಡುವುದು)

(ಇ) ಮಹಿಳೆಯರಿಗೆ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಪೊಲೀಸ್ ಠಾಣೆಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು)

## ಸರಗಳ್ಳತನದ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೪೦೬ (೫೧೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೨ ವರ್ಷಗಳಲ್ಲಿ ಬೆಂಗಳೂರು ಸೇರಿದಂತೆ ರಾಜ್ಯದ ಪ್ರಮುಖ ನಗರದಲ್ಲಿ ನಡೆದ ಸರಗಳ್ಳತನ ಪ್ರಕರಣಗಳ ಸಂಖ್ಯೆ ಎಷ್ಟು; (ವರ್ಷಾವಾರು, ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಇವುಗಳಲ್ಲಿ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಿ ಅಪರಾಧಿಗಳಿಗೆ ಶಿಕ್ಷೆ ನೀಡಲಾಗಿದೆ; ಪತ್ತೆಯಾಗದ ಪ್ರಕರಣಗಳ ಸಂಖ್ಯೆ ಎಷ್ಟು;

(ಇ) ಇಂತಹ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿದ್ದು, ಪೊಲೀಸ್ ಇಲಾಖೆ ಸರಗಳ್ಳತನ ಪ್ರಕರಣಗಳನ್ನು ನಿಯಂತ್ರಿಸುವಲ್ಲಿ ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

## ಜ್ಯೋತಿ ಸಂಜೀವಿನಿ ಯೋಜನೆಯಡಿ ಅನುಮೋದಿತವಾಗಿರುವ ಆಸ್ಪತ್ರೆಗಳ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೪೦೭ (೧೬೯) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಸರ್ಕಾರಿ ನೌಕರರು ಜ್ಯೋತಿ ಸಂಜೀವಿನಿ ಯೋಜನೆಯಡಿ ವೈದ್ಯಕೀಯ ಚಿಕಿತ್ಸೆ ಪಡೆಯಲು ಅನುಮೋದಿತವಾಗಿರುವ ಆಸ್ಪತ್ರೆಗಳೆಷ್ಟು; ಅವುಗಳಾವುವು;

(ಆ) ಅವುಗಳಲ್ಲಿ ಕೊಡಗು ಜಿಲ್ಲೆಯ ಎಷ್ಟು ಆಸ್ಪತ್ರೆಗಳು ಸೇರ್ಪಡೆಗೊಂಡಿದೆ; (ಆಸ್ಪತ್ರೆಗಳ ವಿವರಗಳನ್ನು ನೀಡುವುದು)

(ಇ) ಕೊಡಗು ಜಿಲ್ಲೆಯಲ್ಲಿ ಯಾವುದೇ ಆಸ್ಪತ್ರೆಗಳು ಸೇರ್ಪಡೆಯಾಗಿಲ್ಲ ಎಂದಾದಲ್ಲಿ ಅದಕ್ಕಿರುವ ಕಾರಣಗಳೇನು; (ಸಂಪೂರ್ಣ ವಿವರ ನೀಡುವುದು)

(ಈ) ಜ್ಯೋತಿ ಸಂಜೀವಿನಿ ಯೋಜನೆಯ ಸಂಪೂರ್ಣ ವಿವರ ನೀಡುವುದು?

## ಸರ್ಕಾರಿ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜು ನೌಕರರಿಗೆ ಜ್ಯೋತಿ ಸಂಜೀವಿನಿ ಯೋಜನೆ ಜಾರಿಯಾಗದಿರುವ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-**

೪೦೮ (೪೨೯) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯ ಸರ್ಕಾರಿ ನೌಕರರಿಗೆ ಜ್ಯೋತಿ ಸಂಜೀವಿನಿ ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ; (ವಿವರ ನೀಡುವುದು)

(ಆ) ರಾಜ್ಯದ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಇದುವರೆವಿಗೂ ಸೌಲಭ್ಯ ವಿಸ್ತರಿಸಿ ಕಾರ್ಡ್ ನೀಡದಿರಲು ಕಾರಣಗಳೇನು;

(ಇ) ಯಾವ ಕಾಲಮಿತಿಯಲ್ಲಿ ಈ ಸೌಲಭ್ಯಗಳನ್ನು ನೀಡಲಾಗುತ್ತದೆ; (ವಿವರ ನೀಡುವುದು)

(ಈ) ರಾಜ್ಯ ಸರ್ಕಾರದ ನಿವೃತ್ತ ನೌಕರರುಗಳಿಗೆ ಈ ಸೌಲಭ್ಯವನ್ನು ವಿಸ್ತರಿಸಲು ಸರ್ಕಾರ ಚಿಂತಿಸಿದೆಯೇ;

(ಉ) ಚಿಂತಿಸಿದ್ದಲ್ಲಿ, ಎಷ್ಟು ಜನ ನಿವೃತ್ತ ನೌಕರರಿಗೆ ಈ ಸೌಲಭ್ಯ ನೀಡಲಾಗುತ್ತದೆ; ಯಾವ ಕಾಲಮಿತಿಯಲ್ಲಿ ನೀಡಲಾಗುತ್ತದೆ? (ವಿವರ ನೀಡುವುದು)

## ಕಲಬುರಗಿ ನಗರಕ್ಕೆ ನೀರು ಸರಬರಾಜು ಯೋಜನೆಗಳ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೦೯ (೪೨೫) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ನಗರಕ್ಕೆ ನೀರು ಸರಬರಾಜು ಮಾಡುವ ಯೋಜನೆಗಳು ಯಾವುವು;

(ಆ) ಈ ಯೋಜನೆಗಳಿಂದ ಎಷ್ಟು ನೀರು ಸರಬರಾಜು ಮಾಡಬಹುದಾಗಿದೆ; (ಯೋಜನೆವಾರು ಮಾಹಿತಿ ನೀಡುವುದು)

(ಇ) ಕಲಬುರಗಿ ನಗರಕ್ಕೆ ನಿತ್ಯ ನೀರು ಸರಬರಾಜು ಮಾಡಿದರೆ ಎಷ್ಟು ನೀರಿನ ಅಗತ್ಯವಿದೆ;

(ಇ) ಸದ್ಯ ಎಷ್ಟು ದಿನಗಳಿಗೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ;

(ಈ) ಎಲ್ಲಾ ವಾರ್ಡ್‌ಗಳಿಗೊಮ್ಮೆ ನಿರಂತರ ನೀರು (೨೪/೭) ಸರಬರಾಜು ಮಾಡಲು ಸರ್ಕಾರ ನಿರ್ಧರಿಸಿದೆಯೇ? (ಸಮಗ್ರ ಮಾಹಿತಿ ನೀಡುವುದು)

## ಕಲಬುರಗಿ ಮಹಾನಗರ ಪಾಲಿಕೆಗೆ ನಗರೋತ್ಥಾನದ ಅನುದಾನದ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೧೧೦ (೪೨೪) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಮಹಾನಗರ ಪಾಲಿಕೆಗೆ ನಗರೋತ್ಥಾನ ಯೋಜನೆಯಡಿ ಇದುವರೆವಿಗೂ ಬಿಡುಗಡೆಯಾದ ಅನುದಾನ ಎಷ್ಟು; (ವಿವರ ನೀಡುವುದು)

(ಆ) ಬಿಡುಗಡೆಯಾದ ಅನುದಾನದಲ್ಲಿ ಅನುಮೋದನೆಗೊಂಡ ಕಾಮಗಾರಿಗಳು ಯಾವುವು; (ಸಂಪೂರ್ಣ ವಿವರ ನೀಡುವುದು)

(ಇ) ಅನುಮೋದನೆಗೊಂಡ ಕಾಮಗಾರಿಗಳಲ್ಲಿ ಪೂರ್ಣಗೊಂಡ ಅಪೂರ್ಣಗೊಂಡ ಕಾಮಗಾರಿಗಳೆಷ್ಟು? (ವಿವರ ನೀಡುವುದು)

## ರಾಜ್ಯದಲ್ಲಿನ ಆರಕ್ಷಕ ಠಾಣೆಗಳ ವಿವರಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೪೧೧೧ (೪೯೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಆರಕ್ಷಕ ಠಾಣೆಗಳ ಸಂಖ್ಯೆ ವಿವರಗಳನ್ನು ಜಿಲ್ಲಾವಾರು ಒದಗಿಸುವುದು; ಸದರಿ ಠಾಣೆಗಳಿಗನುಸಾರವಾಗಿ

ರಾಜ್ಯದ ಜನಸಂಖ್ಯೆಗನುಗುಣವಾಗಿ ಸಮರ್ಪಕ ಸಿಬ್ಬಂದಿಗಳು ಇರುವರೇ;

(ಆ) ಇಲ್ಲದಿದ್ದಲ್ಲಿ, ಕಾರಣಗಳೇನು; ಠಾಣೆಗೂ, ಸಿಬ್ಬಂದಿಗೂ, ಜನಸಂಖ್ಯೆಗೂ ಇರುವ ವ್ಯತ್ಯಾಸ ಸರಿಪಡಿಸಲು ಸರ್ಕಾರದ ಕ್ರಮಗಳೇನು;

(ಇ) ಈ ನಿಟ್ಟಿನಲ್ಲಿ ಆರಕ್ಷಕ ಸಿಬ್ಬಂದಿಗಳ ವಿವರಗಳನ್ನು ಮಂಜೂರಾದ ಹುದ್ದೆಗಳು, ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಖಾಲಿ ಇರುವ ಹುದ್ದೆಗಳ ವಿವರಗಳನ್ನು ಮಹಿಳಾ ಸಿಬ್ಬಂದಿ ಸೇರಿದಂತೆ ಜಿಲ್ಲಾವಾರು ಮಾಹಿತಿ ಒದಗಿಸುವುದು;

(ಈ) ಸದರಿ ಖಾಲಿ ಹುದ್ದೆಗಳ ಭರ್ತಿಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಯಾವಾಗ ನೇಮಕಾತಿ ಮಾಡಿಕೊಳ್ಳಲಾಗುತ್ತದೆ;

(ಉ) ಜನಸಂಖ್ಯೆಗನುಸಾರ ಸಿಬ್ಬಂದಿಗಳನ್ನು ಇಲಾಖೆ ನೇಮಕ ಮಾಡಿಕೊಳ್ಳಲು ಇರುವ ತೊಂದರೆಗಳೇನು?

## ರಾಜ್ಯದಲ್ಲಿ ಕೊಲೆ, ಸುಲಿಗೆ ದರೋಡೆಗಳು ನಡೆಯುತ್ತಿರುವ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೪೧೨ (೪೯೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಇತ್ತೀಚೆಗೆ ರಾಜ್ಯದಲ್ಲಿ ಕೊಲೆ–ಸುಲಿಗೆ–ದರೋಡೆಗಳು ಹಾಡುಹಗಲೇ ನಡೆಯುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಕೊಲೆ ಹಲ್ಲೆ ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಅದೇ ರೀತಿ ಚುನಾಯಿತ ಜನಪ್ರತಿನಿಧಿಗಳನ್ನು ಬಹಿರಂಗವಾಗಿ ಸಾರ್ವಜನಿಕರು ಭಯಭೀತರಾಗುವಂತೆ ಹತ್ಯೆಗಳನ್ನು ಮಾಡಿರುವ ಬಗ್ಗೆ ಸರ್ಕಾರದ ನಿಲುವೇನು;

(ಇ) ಇಂತಹ ಕೊಲೆ–ಹಲ್ಲೆ ಪ್ರಕರಣದ ಆರೋಪಿಗಳನ್ನು ಪತ್ತೆ ಮಾಡಲಾಗಿದೆಯೇ; ಯಾವ ಉದ್ದೇಶಕ್ಕೆ ಕೊಲೆಗಳು ನಡೆದಿವೆ ಎಂದು ತನಿಖೆಯಿಂದ ದೃಢಪಟ್ಟಿದೆಯೇ;

(ಈ) ಮುಂಜಾಗ್ರತಾ ಕ್ರಮಗಳನ್ನು ಪ್ರಕರಣಗಳನ್ನು ಸಾಬೀತು ಮಾಡುವಲ್ಲಿ ಗುಪ್ತಚರ ಇಲಾಖೆ ವಿಫಲಗೊಂಡಿರುವುದು ನಿಜವೇ;

(ಉ) ಇದರಿಂದಾಗಿ ಸಮಾಜದ ಮುಖ್ಯವಾಹಿನಿಯಲ್ಲಿರುವ ಎಲ್ಲರೂ ರಕ್ಷಣೆಗೆ ಮುಂದಾಗುವ ಆತಂಕ ಸರ್ಕಾರಕ್ಕಿದೆಯೇ; ಈ ರೀತಿ ಘಟನೆಗಳು ಮರುಕಳಿಸದಂತೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರಗಳನ್ನು ಒದಗಿಸುವುದು)

## ರಾಜ್ಯದಲ್ಲಿರುವ ಕಾರಾಗೃಹಗಳ ಖೈದಿಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೪೧೩ (೯೯೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಕಾರಾಗೃಹ ಹಾಗೂ ಕೇಂದ್ರ ಕಾರಾಗೃಹಗಳ ಸಂಖ್ಯೆ ಎಷ್ಟು; ಈ ಕಾರಾಗೃಹಗಳಲ್ಲಿ ಮಹಿಳಾ ಖೈದಿಗಳೆಷ್ಟು; ಈ ಖೈದಿಗಳ ಜೊತೆಯುಲ್ಲಿರುವ ಮಕ್ಕಳ ಸಂಖ್ಯೆ ಎಷ್ಟು; (ಕೇಂದ್ರ ಕಾರಾಗೃಹಗಳವಾರು, ರಾಜ್ಯ ಕಾರಾಗೃಹಗಳವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಎಷ್ಟು ಮಕ್ಕಳು ವಂಚಿತರಾಗಿದ್ದಾರೆ; ಇದಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

(ಇ) ಈ ಮೇಲಿನ ಕಾರಾಗೃಹಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು; ಬೋಧಕ (instructor) ಖಾಲಿ ಇರುವ ಹುದ್ದೆಗಳೆಷ್ಟು; ಇವುಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳೆಷ್ಟು;

(ಈ) ಈ ಸದರಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ನಿರ್ಧರಿಸಿದೆಯೇ; ಇದ್ದಲ್ಲಿ, ಯಾವಾಗ ಈ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲಾಗುವುದು? (ಹುದ್ದೆವಾರು, ಕಾರಾಗೃಹವಾರು ಮಾಹಿತಿ ನೀಡುವುದು)

## ರಾಜ್ಯದಲ್ಲಿ ಒಟ್ಟು ಮಹಿಳಾ ಪೊಲೀಸ್ ಅಧಿಕಾರಿಗಳು ಮತ್ತು ಪೇದೆಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೪೧೪ (೪೯೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು ಎಷ್ಟು ಮಹಿಳಾ ಪೊಲೀಸ್ ಪೇದೆಗಳು ಹಾಗೂ ಮಹಿಳಾ ಪೊಲೀಸ್ ಅಧಿಕಾರಿಗಳು ಇದ್ದಾರೆ; ಮತ್ತು ಯಾವ ಯಾವ ಠಾಣೆಗಳಲ್ಲಿ ಎಷ್ಟೆಷ್ಟು ಮಹಿಳೆಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ; (ಜಿಲ್ಲಾವಾರು, ತಾಲ್ಲೂಕುವಾರು, ಠಾಣೆವಾರು ಸಂಪೂರ್ಣ ಮಾಹಿತಿ ಒದಗಿಸುವುದು)

(ಆ) ಇಲಾಖೆಯಲ್ಲಿ ಮಹಿಳಾ ಪೇದೆಗಳಿಗೆ ಹಾಗೂ ಮಹಿಳಾ ಪೊಲೀಸ್ ಅಧಿಕಾರಿಗಳಗೆ ಕಿರುಕುಳ ನೀಡುತ್ತಿರುವುದರಿಂದ ಕರ್ತವ್ಯಕ್ಕೆ

ರಾಜೀನಾಮೆ ಕೊಡುತ್ತಿರುವುದು ಹಾಗೂ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಕಳೆದ ಮೂರು ವರ್ಷದ ಮಾಹಿತಿಯನ್ನು ಒದಗಿಸುವುದು)

(ಇ) ಬಂದಿದ್ದರೆ, ಯಾವ ಯಾವ ಠಾಣೆಗಳಲ್ಲಿ ಎಷ್ಟು ಪ್ರಕರಣಗಳಿವೆ; ಮತ್ತು ಕಿರುಕುಳ ನೀಡುತ್ತಿರುವವರ ವಿರುದ್ಧ ಯಾವ ಕ್ರಮವನ್ನು ಕೈಗೊಂಡಿದ್ದೀರಿ? (ತಾಲ್ಲೂಕುವಾರು, ಠಾಣೆವಾರು ಮಾಹಿತಿ ಒದಗಿಸುವುದು)

## ಬೆಂಗಳೂರಿನ ಬಸವೇಶ್ವರ ವೃತ್ತದಿಂದ ಹೆಬ್ಬಾಳದ ಎತ್ತರಿಸಿದ ಮೇಲ್ಸೇತುವೆಯವರೆಗೆ Steel Bridge ನಿರ್ಮಾಣಕ್ಕೆ ವಿರೋಧ ವ್ಯಕ್ತವಾಗಿರುವುದಕ್ಕೆ ಮರುಚಿಂತನೆ ನಡೆಸುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–**

೪೧೫ (೪೪೬) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನ ಬಸವೇಶ್ವರ ವೃತ್ತದಿಂದ ಹೆಬ್ಬಾಳದ ಎತ್ತರಿಸಿದ ಮೇಲ್ಸೇತುವೆವರೆಗಿನ ಉಕ್ಕಿನ ಸೇತುವೆ ನಿರ್ಮಾಣ ಯೋಜನೆಯ ಕುರಿತು ಪೂರ್ಣ ವಿವರ ನೀಡುವುದು;

(ಆ) ಈ ಕುರಿತು ಸಾರ್ವಜನಿಕರಿಂದ ವಿರೋಧ ವ್ಯಕ್ತವಾಗಿರುವುದು ನಿಜವೇ;

(ಇ) ಈ ಬಗ್ಗೆ ಪ್ರಾರಂಭಿಕ ಹಂತದಲ್ಲಿಯೇ ಜನಾಭಿಪ್ರಾಯ ಪಡೆಯಲು ಮತ್ತು ಚರ್ಚೆ ನಡೆಸಲು ಸರ್ಕಾರ ಮುಂದಾಗುವುದೇ?

## ನಿಶ್ಚಿತ ಪೆನ್‌ಷನ್ ಯೋಜನೆ ಮುಂದುವರೆಸುವ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೪೧೬ (೪೮೬) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

ದಿನಾಂಕ: ೦೧–೦೪ ೨೦೦೬ ರಿಂದ ಸರ್ಕಾರಿ ಸೇವೆಗೆ ಸೇರಿರುವ ನೌಕರರಿಗೆ ನೂತನ ಪಿಂಚಣಿ (N.P.S.) ಯೋಜನೆ ಈ ಹಿಂದೆ ಇದ್ದಂತೆ ನಿಶ್ಚಿತ ಪೆನ್‌ಷನ್ ಯೋಜನೆಯನ್ನು ಮುಂದುವರೆಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

**ಶ್ರೀನಿವಾಸ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. 0197/700 ಪ್ರತಿಗಳು/15–11–2016